# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 14.07.2011 ರಂದು ನಡೆದ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| **ಶ್ರೀಯುತರುಗಳಾದ :** | |
| ಜಿ. ಮಂಜುನಾಥರಾಜು – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ, |
| ಜಿ. ಮಂಜುನಾಥ – ಸದಸ್ಯರು | ಅಪರ ಆಯುಕ್ತರು (ಆಸ್ತಿಗಳು), |
| ಎಂ.ಸಿ. ಶ್ರೀನಿವಾಸ್ – ಸದಸ್ಯರು | ಉಪ ಆಯುಕ್ತರು (ಆಸ್ತಿಗಳು) |
| ವಿ. ವಾಗಿಶ್ – ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಯೋಜನೆ–ಪೂರ್ವ), (ಎಸ್.ಡಬ್ಲ್ಯೂ.ಡಿ), (ಆರ್.ಆರ್.ನಗರ), (ಮಹಾಲಕ್ಷ್ಮಿಪುರ) |
| ಮಂಜುನಾಥ – ಸದಸ್ಯರು | ಸಹಾಯಕ ಕಂದಾಯ ಅಧಿಕಾರಿ (ಪದ್ಮನಾಭನಗರ), (ಚಿಕ್ಕಪೇಟೆ), (ಹೂವ–ಮಾರುಕಟ್ಟೆ), (ಬಿ.ಟಿ.ಎಂ), (ಆರ್‌ಐ–ಪಶ್ಚಿಮ) |
| ಎಲ್. ನಾಗರತ್ನ – ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರು (ಆರ್‌ಐ–ಪಶ್ಚಿಮ) |
| ವರಲಕ್ಷ್ಮಿ. ಜೆ – ಸದಸ್ಯರು | ಸಹಾಯಕ ಅಭಿಯಂತರರು (ಎಸ್.ಡಬ್ಲ್ಯೂ.ಡಿ–ಪಶ್ಚಿಮ), (ಆರ್‌ಐ–ಪಶ್ಚಿಮ) |
| ಆಶಾ ಸುರೇಶ್ – ಸದಸ್ಯರು | |
| ಎನ್. ಜಯಪಾಲ – ಸದಸ್ಯರು | |
| ಲಾವಣ್ಯಗಣೇಶ್‌ರೆಡ್ಡಿ – ಸದಸ್ಯರು | |
| **ಗೈರು ಹಾಜರಿದ್ದ ಸದಸ್ಯರು** | |
| ಲತಾ. ಕೆ – ಸದಸ್ಯರು | |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

## ***01]. ವಿಷಯದ ಸಂಖ್ಯೆ :–ತೆಆಸ್ಥಾಸ/40/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಎ3(2)/ಪಿಆರ್/112/10–11, ದಿನಾಂಕ ಃ 31–01–2011ರಲ್ಲಿ ವಿವರಿಸಿರುವಂತೆ, ಶ್ರೀ ರಾಘವೇಂದ್ರ, ಬಿ.ಇ.(ಮೆಕಾನಿಕಲ್) ಬಿನ್ ಯಾದಗೀರ್ ರವರು ಕಬ್ಬನ್ ಪಾರ್ಕ್ ಪೋಲೀಸ್ ಸ್ಟೇಷನ್ ಹತ್ತಿರವಿರುವ ಎಸ್.ಟಿ.ಡಿ. ಬೂತ್ ಪಕ್ಕದಲ್ಲಿ ಖಾಲಿ ಇರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿದ ಜಾಗದಲ್ಲಿ 10x10 ಅಡಿ ಅಳತೆಯ ಜಾಗವನ್ನು ನಂದಿನಿ ಹಾಲಿನ ಮಳಿಗೆ ತೆರೆಯಲು ಅನುಮತಿ ಕೋರಿರುತ್ತಾರೆ.

ಅನುಮತಿ ಕೋರಿರುವ ಜಾಗಕ್ಕೆ ಹೊಂದಿಕೊಂಡು ಮೀನುಗಾರಿಕೆ ಕ್ಯಾಂಟೀನ್ ಮತ್ತು ಹೋಟೆಲ್ ಇರುತ್ತದೆಂದೂ ಕ್ಷೀರ ಮಳಿಗೆಯನ್ನು ತೆರೆಯಲು ಅನುಮತಿ ನೀಡಿದಲ್ಲಿ, ಪಾದಚಾರಿಗಳಿಗಾಗಲೀ ಅಥವಾ ಸ್ಥಳೀಯರಿಗಾಗಲೀ ತೊಂದರೆಯಾಗುವುದಿಲ್ಲವೆಂದು ಸಹಾಯಕ ಕಂದಾಯ ಅಧಿಕಾರಿ(ವಸಂತನಗರ) ರವರು ಅಭಿಪ್ರಾಯಿಸಿರುತ್ತಾರೆ. ಹಾಗೂ ಸಹಾಯಕ ಕಾರ್ಯನಿರ್ವಹಕ ಅಭಿಯಂತರರ ವರದಿಯಲ್ಲಿ ರಸ್ತೆ ಅಗಲೀಕರಣ ವ್ಯಾಪ್ತಿಗೆ ಬರುವುದಿಲ್ಲ ಎಂದು ಮಾಹಿತಿ ನೀಡಿರುತ್ತಾರೆ.

ಆದರೆ, ಸರ್ಕಾರದ ಆದೇಶ ಸಂಖ್ಯೆ:ನಅಇ/ಟಿಎಂಡಿ/2002, ಬೆಂಗಳೂರು, ದಿನಾಂಕ: 02–06–2003ರ ಮಾರ್ಗಸೂಚಿ ಕ್ರಮಸಂಖ್ಯೆ (VI) ರನ್ವಯ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರಿವನ್ನು ಉಪಯೋಗಿಸಿ ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ, ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ

ಹರಾಜು ಮೂಲಕವೇ ನೀಡುವುದು. ಮೇಲ್ಕಣಿಸಿದ ಮಾರ್ಗಸೂಚಿಗಳನ್ನು ಉಲ್ಲಂಘಿಸತಕ್ಕದಲ್ಲ ಎಂಬುದಾಗಿದೆ.

ಆದ್ದರಿಂದ, ಶ್ರೀ ರಾಘವೇಂದ್ರರವರಿಗೆ ನಂದಿನಿ ಹಾಲಿನ ಮಳಿಗೆ ಸ್ಥಾಪಿಸಲು ಅನುಮತಿ ನೀಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ : 31-1-2011 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 05-04-2011ರ ನಿರ್ಣಯ.

***<u>ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ-</u>***

## ***<u>02]. ವಿಷಯದ ಸಂಖ್ಯೆ :-ತೆಆಸ್ಥಾಸ/47/2011-12</u>***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)/ಪಿಆರ್/61/10-11, ದಿನಾಂಕ : 18-03-2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವ್ಯಾಪ್ತಿಯ ದಾಸರಹಳ್ಳಿ ವಲಯದ ವಾರ್ಡ್ ನಂ.41, ಪಾರ್ಕ್ ಪಕ್ಕದ ಜಾಗವನ್ನು ಹಾಲು ಉತ್ಪನ್ನ ಮಾರಾಟ ಮಳಿಗೆ ಸ್ಥಾಪಿಸಲು 10x10 ಅಡಿಗಳ ಜಾಗವನ್ನು ನಂದಿನಿ ಉತ್ಪನ್ನಗಳ ಮಾರಾಟ ಮಳಿಗೆ ಸ್ಥಾಪಿಸಲು ಅನುಮತಿ ನೀಡುವಂತೆ ಶ್ರೀಮತಿ.ಎಂ.ಧನಲಕ್ಷ್ಮಿ ರವರು ಕೋರಿರುತ್ತಾರೆ.

ವಾರ್ಡ್ ನಂ.41ರ ನಗರ ಪಾಲಿಕೆ ಸದಸ್ಯರು, ಸಹ ಕಂದಾಯ ಅಧಿಕಾರಿ (ಪೀಣ್ಯ ಕೈಗಾರಿಕಾ ಪ್ರದೇಶ) ರವರಿಗೆ ದಿನಾಂಕ : 08-01-2011ರಲ್ಲಿ ಮನವಿ ಸಲ್ಲಿಸಿದರ ಮೇರೆಗೆ ಪುನ: ಸಹ ಕಂದಾಯ ಅಧಿಕಾರಿ ರವರು ಕಂಡಿಕೆ 47 ಮತ್ತು 48ರಲ್ಲಿ ವರದಿ ಸಲ್ಲಿಸಿದ್ದು, ಅರ್ಜಿದಾರರು ಕೋರಿರುವ ಜಾಗವು MEI ಕಾಲೋನಿಯಲ್ಲಿರುವ ಪಾರ್ಕ್ ಹತ್ತಿರದ ಸಿ.ಎ ನಿವೇಶನವಾಗಿದ್ದು, ಅರ್ಜಿದಾರರಿಗೆ 10 x 10 ಅಡಿಗಳ ಜಾಗವು ನಂದಿನಿ ಮಿಲ್ಕ್ ಪಾರ್ಲರ್ ತೆರೆಯುವ ಉದ್ದೇಶಕ್ಕೆ ಗುತ್ತಿಗೆ ನೀಡಲು ಪ್ರಸ್ತಾವನೆಯನ್ನು ವಲಯ ಅಧಿಕಾರಿಗಳ ಮುಖಾಂತರ ಸಲ್ಲಿಸಿರುತ್ತಾರೆ. ಇದರಂತೆ ಮಾನ್ಯ ಆಯುಕ್ತರ ಆದೇಶದಂತೆ 3 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೀಡಲು ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿ ಮಂಡಿಸಲಾಗಿದೆ.

ಕರ್ನಾಟಕ ಮುನಿಸಿಪಲ್ ಕಾಯ್ದೆ ಅನ್ವಯ 1976 ಕಲಂ 176ರ (6) ಹಾಗು (ಬಿ) 2 ಪ್ರಕಾರ 1 ವರ್ಷಕ್ಕೆ ಗುತ್ತಿಗೆ ನೀಡುವ ಅಧಿಕಾರ ಆಯುಕ್ತರಿಗೆ ಇರುತ್ತದೆ. ನಗರ ಯೋಜನೆ ಮತ್ತು ಅಭಿವೃದ್ಧಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯೊಡನೆ 3 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಶವಿರುತ್ತದೆ. ಈ ಸ್ಥಾಯಿ ಸಮಿತಿಗಳು ಮತ್ತು ಮಹಾನಗರ ಪಾಲಿಕೆಯ ಸಭೆಯ ಅನುಮೋದನೆಯೊಡನೆ 5 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಶವಿರುತ್ತದೆ. ಗುತ್ತಿಗೆ ಅವಧಿಯು 5 ವರ್ಷಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಸರ್ಕಾರದ ಅನುಮೋದನೆ ಅವಶ್ಯವಿರುತ್ತದೆ.

ಸದರಿ ಸ್ಥಳದ ಪ್ರಸ್ತುತ ಮಾರುಕಟ್ಟೆ ದರವು ದಿನಾಂಕ:17-04-2007ರ ಸರ್ಕಾರದ ಮಾರ್ಗಸೂಚಿ ದರದಂತೆ ನಿವೇಶನದ ಚದರ ಅಡಿ ಒಂದಕ್ಕೆ ವಸತಿಯೇತರ ಉದ್ದೇಶಕ್ಕೆ ರೂ.1050/- ಗಳಾಗಿದ್ದು, ಅರ್ಜಿದಾರರು ಕೋರಿರುವ 10*10 ಅಡಿಗಳ ಜಾಗವನ್ನು 100 ಚದರ ಅಡಿಗಳಾಗಿರುತ್ತದೆ. ಇದರಂತೆ 100 x 1050=1,05,000/- ರೂ. ಗಳಾಗುತ್ತದೆ. ಶೇ 10% ರಂತೆ ಲೆಕ್ಕಚಾರ ಮಾಡಲಾಗಿ ರೂ. 10.500 ವಾರ್ಷಿಕ ಗುತ್ತಿಗೆ ವೆಚ್ಚವಾಗುತ್ತದೆ. ಇದರಂತೆ ಮಾಸಿಕ ಗುತ್ತಿಗೆ ರೂ.875/- ಗಳಾಗುತ್ತದೆ.

ಈ ಮೇಲಿನ ಹಿನ್ನೆಲೆಯಲ್ಲಿ ಶ್ರೀಮತಿ.ಎಂ.ಧನಲಕ್ಷ್ಮಿ ರವರಿಗೆ ಹಾಲಿನ ಉತ್ಪನ್ನ ಮಾರಾಟ ಮಳಿಗೆಗೆ 3 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ : 18-03-2011 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 05-04-2011ರ ನಿರ್ಣಯ.

<u>ನಿರ್ಣಯ :-</u> ***<u>ದಿನಾಂಕ 18-03-2011ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 05-04-2011ರ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.500/- (ಐದು ನೂರು)ಗಳ ಗುತ್ತಿಗೆ ಹಣವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.</u>***

***03]. ವಿಷಯದ ಸಂಖ್ಯೆ :–ತೆಆಸ್ಥಾಸ/67/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)/ಪಿಆರ್/154/10–11, ದಿನಾಂಕ : 05–03–2011ರಲ್ಲಿ ವಿವರಿಸಿರುವಂತೆ, ಸಹ ಕಂದಾಯ ಅಧಿಕಾರಿ (ಪುಲಿಕೇಶಿನಗರ) ಉಪ ವಿಭಾಗಕ್ಕೆ ಬರುವ ವಾರ್ಡ್–61 ಎಸ್.ಕೆ.ಗಾರ್ಡನ್‌ನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸ್ವತ್ತಿನ ಅಳತೆ 100X200 ಅಡಿಗಳ ನಿವೇಶನವನ್ನು 30 ವರ್ಷಗಳಿಗೆ ದಿನಾಂಕ:02–10–1975 ರಿಂದ 01–10–2005ರ ವರೆವಿಗೆ ಅಧ್ಯಕ್ಷರು ಕುಂಬಾರ ಕರಕುಶಲ ಕಾರ್ಮಿಕರ ಸಂಘ ನ್ಯೂ ಪಾಟರಿ ಟೌನ್, ವಾರ್ಡ್–61 ಬೆಂಗಳೂರು–05 ರವರಿಗೆ ಸರ್ಕಾರದ ಆದೇಶ ಸಂಖ್ಯೆ:ಹೆಚ್.ಎಂ.ಎ/332/ಎಂ.ಎನ್.ಜಿ/75 ದಿನಾಂಕ:30–08–1975ರಲ್ಲಿ ವಾರ್ಷಿಕ ರೂ.500/–ಗಳ ಗುತ್ತಿಗೆ ಆಧಾರದ ಮೇಲೆ ನೀಡಲಾಗಿದ್ದು, ದಿನಾಂಕ:01–10–2005 ರಂದು ಗುತ್ತಿಗೆಗೆ ನೀಡಿರುವ ಅವಧಿಯು ಪೂರ್ಣಗೊಂಡಿರುವುದರಿಂದ ನಗರ ಪಾಲಿಕೆ ಸ್ವತ್ತನ್ನು ನಗರ ಪಾಲಿಕೆಗೆ ಹಿಂದಿರುಗಿಸಲು ನೋಟೀಸ್ ಜಾರಿ ಮಾಡಲಾಗಿರುತ್ತದೆ.

ದಿನಾಂಕ:02–08–2010 ರಂದು ಸದರಿ ಸಂಘದವರು ಗುತ್ತಿಗೆ ಅವಧಿಯನ್ನು ನವೀಕರಿಸಲು ಶೇ 50% ರಷ್ಟು ರಿಯಾಯಿತಿ ನೀಡಿ ಕ್ರಯಕ್ಕೆ ಮಂಜೂರು ಮಾಡಲು ಸರ್ಕಾರವನ್ನು ಕೋರಿದ್ದು, ಸರ್ಕಾರದ ಆದೇಶ ಸಂಖ್ಯೆ:ನಅಇ15/ಎಂಎನ್‌ಜಿ/2006 ದಿನಾಂಕ:06–05–2006 ರಂತೆ ಸದರಿಯವರ ಮನವಿಯನ್ನು ತಿರಸ್ಕರಿಸಿರುತ್ತಾರೆ.

ಅದರಂತೆ ಗುತ್ತಿಗೆಗೆ ನೀಡಿರುವ ನಗರ ಪಾಲಿಕೆ ಸ್ವತ್ತನ್ನು ಪಾಲಿಕೆ ವಶಕ್ಕೆ ಪಡೆಯಲು ಮುಖ್ಯ ಅಭಿಯಂತರರು (ಪೂರ್ವ) ಹಾಗೂ ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ) ರವರಿಗೆ ಕಳುಹಿಸಿಕೊಡಲಾಗಿದ್ದು, ಈ ಮಧ್ಯೆ ನಗರ ಪಾಲಿಕೆ ಸ್ವತ್ತನ್ನು ಹಿಂದಿರುಗಿಸಲು ಉಪ ಆಯುಕ್ತರು (ಆಸ್ತಿಗಳು) ರವರ ಆದೇಶದ ಸಂಖ್ಯೆ:ಅ.ಆ.ಸ/ಇ.ಸಿ/ಪಿಆರ್/16/10–11, ದಿನಾಂಕ:29–07–2010 ರಂತೆ ಕೆ.ಪಿ.ಪಿ.ಕಾಯ್ದೆ 4 ರಂತೆ ಅಧ್ಯಕ್ಷರು ಕುಂಬಾರ ಕರಕುಶಲ ಸಂಘಕ್ಕೆ ನೋಟೀಸ್ ಜಾರಿಗೊಳಿಸಿದ್ದು, ಪುನಃ ದಿನಾಂಕ: 17–09–2010 ರಂದು ಕೆ.ಪಿ.ಪಿ.ಕಾಯ್ದೆ 5 ಫಾರಂ 'ಬಿ' ರ ಪ್ರಕಾರ ನಗರ ಪಾಲಿಕೆ ಸ್ವತ್ತನ್ನು ಹಿಂದಿರುಗಿಸಲು ನೋಟೀಸ್ ಜಾರಿಮಾಡಲಾಗಿರುತ್ತದೆ. ಈ ಮಧ್ಯೆ ಶ್ರೀ.ಕಣ್ಣನ್ ಮತ್ತು ಶ್ರೀ. ವೆಂಕಟರಾಮಯ್ಯ ಶೆಟ್ಟಿ ಎಂಬುವವರು ಸದರಿಯವರಿಗೆ ನಗರ ಪಾಲಿಕೆ ವತಿಯಿಂದ ನೀಡಿರುವ ಗುತ್ತಿಗೆ ಅವಧಿಯು ಮುಗಿದಿರುವುದರಿಂದ ಸ್ವತ್ತನ್ನು ಹಿಂಪಡೆಯಲು ದೂರು ಅರ್ಜಿ ಸಹ ಸಲ್ಲಿಸಿರುತ್ತಾರೆ.

ಈ ಮಧ್ಯೆ ಸಂಘದವರು ಮಾನ್ಯ ಸಚಿವರ ಶಿಫಾರಸ್ಸು ಪತ್ರವನ್ನು ನೀಡಿ ಸದರಿ ಸಂಘಕ್ಕೆ ಮುಂದಿನ 50 ವರ್ಷಗಳ ಅವಧಿಗೆ ಗುತ್ತಿಗೆ ಅವಧಿ ನವೀಕರಿಸಲು ಕೋರಿರುತ್ತಾರೆ. ಮಾನ್ಯ ಆಯುಕ್ತರವರು ಸಂಖ್ಯೆ:ಡಿ.ಎಸ್.ಆರ್/5262/10–11 ದಿನಾಂಕ:22–11–2010ರ ಆದೇಶದಂತೆ ಸದರಿ ಗುತ್ತಿಗೆಗೆ ನೀಡಿದ್ದ ಸ್ವತ್ತನ್ನು ಕ್ರಯಕ್ಕೆ ನೀಡಲು ಕೋರಿರುವುದನ್ನು ತಿರಸ್ಕರಿಸಿ ಗುತ್ತಿಗೆ ಅವಧಿ ಮುಗಿದಿರುವ ದಿನಾಂಕದಿಂದ 5 ವರ್ಷದ ಅವಧಿಗೆ ನವೀಕರಿಸಲು ಪ್ರಸ್ತಾವನೆಯನ್ನು ಅನುಮೋದಿಸಿರುತ್ತಾರೆ.

ಪ್ರಸ್ತುತ ಸ್ವತ್ತಿನ ಮಾರುಕಟ್ಟೆ ದರವು ವಸತಿಗೆ ಚದರ ಅಡಿ 1ಕ್ಕೆ ರೂ.2200/– ಗಳಿದ್ದು, ಸ್ವತ್ತಿನ ವಿಸ್ತೀರ್ಣ 100X200=20,000 ಚದರ ಅಡಿಗಳಿದ್ದು, ಸ್ವತ್ತಿನ ಮೌಲ್ಯ ರೂ.4,40,00,000/–ಗಳಾಗುತ್ತದೆ. ಮಾರುಕಟ್ಟೆ ದರದ ಶೇ 10% ರಂತೆ ಪರಿಗಣಿಸಿದಲ್ಲಿ ವಾರ್ಷಿಕ 44,00000/–ರೂಗಳಾಗುತ್ತದೆ. ಮಾಸಿಕ ರೂ.3,66,667/–ಗಳಾಗುತ್ತದೆ. ಆದ್ದರಿಂದ ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ ಕರಾರು ನೊಂದಾಯಿಸುವ ದಿನಾಂಕದವರೆಗೆ ಹಳೆಯ ದರದಂತೆ,

ನಂತರದ 5 ವರ್ಷಗಳಿಗೆ ಪ್ರಸಕ್ತ ಮಾರುಕಟ್ಟೆ ದರದಂತೆ ಗುತ್ತಿಗೆ ಅವಧಿಯನ್ನು ನವೀಕರಿಸುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ : 05–03–2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 15–03–2011ರ ನಿರ್ಣಯ.

***–ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ–***

## *04]. ವಿಷಯದ ಸಂಖ್ಯೆ :–ತೆಆಸ್ಥಾಸ/88/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)/ಪಿಆರ್/10/11–12, ದಿನಾಂಕ : 02–05–2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್–172, ಮಡಿವಾಳ ವ್ಯಾಪ್ತಿಯ 20ನೇ ಮುಖ್ಯರಸ್ತೆ. ಬಿ.ಟಿ.ಎಂ. 1ನೇ ಹಂತದ ಬೃಹತ್ ನೀರುಗಾಲುವೆ ಪಕ್ಕದಲ್ಲಿರುವ ಪಾಲಿಕೆ ಸಂಪರ್ಕ ಕೇಂದ್ರದ ಬಳಿ ಇರುವ 10x10 ಅಡಿಗಳ ಜಾಗದಲ್ಲಿ ನಂದಿನಿ ಮಿಲ್ಕ್ ಪಾರ್ಲರ್ ತೆರೆಯಲು ಸ್ಥಳವನ್ನು ಮಂಜೂರು ಮಾಡುವಂತೆ ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಹಾಲು ಒಕ್ಕೂಟ, ಬೆಂಗಳೂರು ರವರು ಕೋರಿರುತ್ತಾರೆ.

ವಲಯಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ, ನಕ್ಷೆ ತಯಾರಿಸಿ, ಸದರಿಯವರು ಕೋರಿರುವ ಸ್ಥಳವು ಉದ್ಯಾನವನ ದಲ್ಲಿನ 10x10 ಅಡಿಗಳ ಜಾಗವಾಗಿದ್ದು, ಸಾರ್ವಜನಿಕರಿಗೆ ಉತ್ತಮ ಆರೋಗ್ಯಕರ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡಲು ಅನುಮತಿ ನೀಡಬಹುದೆಂದು ಅಭಿಪ್ರಾಯಪಟ್ಟಿರುತ್ತಾರೆ. ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು ಕೇಳಿರುವ ಜಾಗವು ಖಾಲಿ ಇದ್ದು, ಪ್ರಸ್ತುತ ಸ್ಥಳದಲ್ಲಿ ತ್ಯಾಜ್ಯ ವಸ್ತುಗಳು ಸಂಗ್ರಹವಾಗಿದ್ದು, ಪಕ್ಕದಲ್ಲಿಯೇ ಎಸ್‌ಡಬ್ಲ್ಯೂಡಿ ಹಾದು ಹೋಗಿರುತ್ತದೆ. ಪೂರ್ವ ಭಾಗದ ಜಾಗದಲ್ಲಿ ನಗರ ಪಾಲಿಕೆ ಸಂಪರ್ಕ ಕೇಂದ್ರವಿದ್ದು, ಪ್ರಸ್ತುತ ಸ್ಥಳದ ಎದುರು ಭಾಗದಲ್ಲಿ ನೂರಾರು ಮನೆಗಳಿದ್ದು, ವಾಸದ ವಲಯವಾಗಿರುತ್ತದೆ. ಇದು ಪಾರ್ಕ್ ಎಂದು ಸೂಚಿಸಿರುವ ಸ್ಥಳದಲ್ಲಿದ್ದು, ವಾಸ್ತವವಾಗಿ ಪಾರ್ಕ್ ಅಭಿವೃದ್ಧಿಗೊಳ್ಳದೆ ಪೂರ್ಣ ಜಾಗವನ್ನು ತಂತಿ ಬೇಲಿಯಿಂದ ರಕ್ಷಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಹಾಲು ಒಕ್ಕೂಟ, ಬೆಂಗಳೂರು ರವರ ಕೋರಿಕೆಯನ್ನು ಪರಿಗಣಿಸಲು ಅಭಿಪ್ರಾಯಿಸಲಾಗಿದೆ.

ಕರ್ನಾಟಕ ಮುನಿಸಿಪಲ್ ಕಾಯ್ದೆನ್ವಯ–1976 ಕಲಂ–176ರ (6) ಹಾಗೂ (ಬಿ)IIರ ಪ್ರಕಾರ ಸ್ಥಾಯಿ ಸಮಿತಿಗಳಿಗೆ 3 ವರ್ಷಗಳ ಅವಧಿಗೆ ಹಾಗೂ ಪಾಲಿಕೆ ಸಭೆಗೆ 5 ವರ್ಷಕ್ಕೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ. ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ(ಕಂ)/ ಪಿ.ಆರ್/115/01–02, ದಿ:01–03–2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆ ಕನಿಷ್ಟ ಶೇ:10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸಬೇಕಾಗಿರುತ್ತದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:17–04–2007ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ವಸತಿಯೇತರ ರೂ.4,200/–

ಗಳಿದ್ದು, ಅರ್ಜಿದಾರರುಗಳು ಕೋರಿರುವ 10X10 ಅಡಿಗಳ ಜಾಗವು 100 ಚ.ಅಡಿಗಳಾಗುತ್ತದೆ. ಇದರಂತೆ 4200X100 = 4,20,000/- ರೂ.ಗಳಾಗುತ್ತದೆ. ಶೇ:10%ರಷ್ಟು ವಾರ್ಷಿಕ ಗುತ್ತಿಗೆ ಹಣ 42,000/- ರೂ.ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣ 3,500/- ರೂ.ಗಳಾಗುತ್ತದೆ.

ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ಕಲಂ-176ರ ಪ್ರಕಾರ ಹಾಗೂ ಸರ್ಕಾರಿ ಆದೇಶ ಸಂಖ್ಯೆ:ನಅಇ/129/ಡಿ.ಎಂ.ಡಿ./2002, ದಿನಾಂಕ:02-06-2003ರನ್ವಯ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದ್ದಲ್ಲಿ, ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜಿನ ಮೂಲಕವೇ ನೀಡುವುದೆಂದಿದೆ.

ಪ್ರಸ್ತುತ ಪ್ರಕರಣದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಹಾಲು ಒಕ್ಕೂಟ, ಬೆಂಗಳೂರು ರವರು ಹಾಲಿನ ಮಾರಾಟ ಮಳಿಗೆಗಾಗಿ ಸ್ಥಳವನ್ನು ಗುತ್ತಿಗೆ ನೀಡಲು ಕೋರಿದ್ದು, ಗುತ್ತಿಗೆ ನೀಡುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಂಡಿಸಿರುವ ಆಯುಕ್ತರ ದಿನಾಂಕ : 02-05-2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 18-05-2011ರ ನಿರ್ಣಯ.

ನಿರ್ಣಯ :- ***ಆಯುಕ್ತರ ದಿನಾಂಕ 02-05-2011ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಜಾಗವು ಪಾರ್ಕ್ ಎಂದು ಸೂಚಿಸಿರುವ ಸ್ಥಳದಲ್ಲಿರುವುದು ಕಂಡು ಬರುವುದರಿಂದ ಈ ಸ್ಥಳವನ್ನು ಗುತ್ತಿಗೆ ನೀಡುವ ಬಗ್ಗೆ ಪುನರ್ ಪರಿಶೀಲಿಸಿ ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.***

***05]. ವಿಷಯದ ಸಂಖ್ಯೆ :-ತೆಆಸ್ಥಾಸ/107/2011-12***

ಆಯುಕ್ತರ ಟಿಪ್ಪಣಿ ದಿನಾಂಕ : 14-06-2011ರಲ್ಲಿ ವಿವರಿಸಿರುವಂತೆ, ವಿ. ಮಹದೇವ್ ರವರು ಹೊಸಕೆರೆ ರಸ್ತೆ (ಮಾಗಡಿ ರಸ್ತೆ) ಬಿನ್ನಿಮಿಲ್ ಮುಂಭಾಗ 15 X 15 ಅಡಿಗಳ ನಗರ ಪಾಲಿಕೆ ಜಾಗದ ಗುತ್ತಿಗೆ ಅವಧಿಯನ್ನು ನವೀಕರಿಸಲು ಕೋರಿರುತ್ತಾರೆ.

ಸದರಿ ಗುತ್ತಿಗೆಯ ಬಗ್ಗೆ 1974 ರ ಕೆ.ಪಿ.ಪಿ. ಕಾಯ್ದೆ ಅಧಿನಿಯಮ 4(1) ರ ರೀತ್ಯಾ ದಿನಾಂಕ: 09-08-2010 ರಲ್ಲಿ ಹೊಸಕೆರೆ ರಸ್ತೆ (ಮಾಗಡಿ ರಸ್ತೆ) ಬಿನ್ನಿಮಿಲ್ ಮುಂಭಾಗ 15 X 15 ಅಡಿಗಳ ಜಾಗದಲ್ಲಿ ಅಂಗಡಿ ನಡೆಸುತ್ತಿದ್ದು ಗುತ್ತಿಗೆ ಅವಧಿಯನ್ನು ನವೀಕರಿಸಿಕೊಳ್ಳದೇ ಅನಧಿಕೃತವಾಗಿ ನಡೆಸುತ್ತಿರುವ ಮೇರೆಗೆ ನೋಟಿಸ್ ಜಾರಿ ಮಾಡಲಾಗಿರುತ್ತದೆ.

ಸದರಿ ಗುತ್ತಿಗೆದಾರರನ್ನು ಸಂಖ್ಯೆ:ಡಿ.ಆರ್.ಬಿ(ಸಿ)ಪಿ.ಆರ್/308/98-99 ದಿನಾಂಕ: 09-12-1998 ತಿಂಗಳಿಗೆ ರೂ. 500/- ರಂತೆ ಗುತ್ತಿಗೆಗೆ ನೀಡಲಾಗಿತ್ತು ಹಾಗೂ ಪೆಟ್ಟಿ ಅಂಗಡಿ ನಡೆಸಲು ಸಹ ಅನುಮತಿ ನೀಡಲಾಗಿತ್ತು.

ಅರ್ಜಿದಾರರು ಆರ್.ಸಿ.ಸಿ ಕಟ್ಟಡವನ್ನು ಪರಿವರ್ತಿಸಿಕೊಂಡಿರುತ್ತಾರೆ. ಆಗಸ್ಟ್ 2000 ರಿಂದ ಇಲ್ಲಿಯವರೆಗೂ ರೂ. 67500/– ಬಾಕಿ ಇರುತ್ತದೆ.

ಆದ್ದರಿಂದ ಬಾಕಿ ಇರುವ ಗುತ್ತಿಗೆ ಹಣವನ್ನು ಪಾವತಿಸಿಕೊಂಡು ಗುತ್ತಿಗೆ ಅವಧಿ ನವೀಕರಿಸುವುದೇ ಅಥವಾ ನಗರ ಪಾಲಿಕೆ ಜಾಗವನ್ನು ತೆರವುಗೊಳಿಸುವುದೇ ಎಂಬ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***–ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ–***

## *06]. ವಿಷಯದ ಸಂಖ್ಯೆ :–ತೆಆಸ್ಥಾಸ/108/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಸ.ಕಂ.ಅ(ಪ–ಮಾ)/ಪಿ.ಆರ್/390/11–12, ದಿನಾಂಕ : 14–06–2011ರಲ್ಲಿ ವಿವರಿಸಿರುವಂತೆ, ರಾಜಾಜಿನಗರ ವಾಣಿಜ್ಯ ಸಂಕೀರ್ಣದ ಮೊದಲನೇ ಮಹಡಿಯಲ್ಲಿರುವ ಮಳಿಗೆ ಸಂಖ್ಯೆ : 54 ರಿಂದ 106ರ ವರೆಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗಳ ಜಂಟಿ ಸಭೇಯ ದಿ : 9–2–1987 ರ ನಡವಳಿಗಳ ವಿಷಯದ ಸಂಖ್ಯೆ:4 (389)ರಂತೆ ಮಾಸಿಕ ರೂ.15,000/–ಗಳಂತೆ ದಿ:1–4–1987 ರಿಂದ 3 ವರ್ಷಗಳ ಅವಧಿಗೆ ಮೆ: ಜಿಂದಾಲ್ ಮೆಡಿಕಲ್ ಸೊಸೈಟಿ ಚಾರಿಟಬಲ್ ಆಸ್ಪತ್ರೆಯವರಿಗೆ ಉಚಿತ ಆಸ್ಪತ್ರೆ ನಡೆಸಲು ನೀಡಲಾಗಿರುತ್ತದೆ.

ದಿ : 21–12–1988ರಂದು ನಡೆದ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ವಿಷಯದ ಸಂಖ್ಯೆ:12(147)ರಂತೆ ಸದರಿ ಸಂಸ್ಥೆಯವರಿಗೆ ಗುತ್ತಿಗೆ ಅವಧಿಯನ್ನು ದಿ:1–4–1987 ರಿಂದ 15 ವರ್ಷಗಳಿಗೆ ನಿಗಧಿಪಡಿಸಿ 3 ವರ್ಷಗಳಿಗೊಮ್ಮೆ ಶೇಕಡ 10 ರಷ್ಟು ಬಾಡಿಗೆಯನ್ನು ಹೆಚ್ಚಿಸಲು ಕೈಗೊಂಡಿರುವ ನಿರ್ಣಯದಂತೆ ಹಾಗೂ ದಿನಾಂಕ:12–03–1990ರಂದು ಮಾಡಲ್ಪಟ್ಟ ಕರಾರು ಪತ್ರದಂತೆ ಈ ಕೆಳಕಂಡಂತೆ ಪರವಾನಗಿಯನ್ನು 1–4–1987 ರಿಂದ 15 ವರ್ಷಗಳಿಗೆ ನೀಡಲಾಗಿರುತ್ತದೆ.

| ಅವಧಿ | ಪರವಾನಗಿ ಶುಲ್ಕ ರೂ. |
|---|---|
| 1–4–1987 ರಿಂದ 31–3–1990 3 ವರ್ಷ | ರೂ.15,000/– |
| 1–4–1990 ರಿಂದ 31–3–1993 3 ವರ್ಷ | ರೂ.16,500/– |
| 1–4–1993 ರಿಂದ 31–3–1996 3 ವರ್ಷ | ರೂ.18,150/– |
| 1–4–1996 ರಿಂದ 31–3–1999 3 ವರ್ಷ | ರೂ.19,965/– |
| 1–4–1999 ರಿಂದ 31–3–2002 3 ವರ್ಷ | ರೂ.21,962/– |
| 15 ವರ್ಷ | |

ಸದರಿ ಸಂಸ್ಥೆಯವರು ದಿನಾಂಕ:29–10–19988ರಲ್ಲಿ ಮನವಿ ಸಲ್ಲಿಸಿ, ಪರವಾನಗಿ ಶುಲ್ಕದ ಮೇಲೆ ವಿಧಿಸಿರುವ ಶೇಕಡ 20%ರಷ್ಟು ಸೇವಾ ಶುಲ್ಕವನ್ನು ಮನ್ನಾ ಮಾಡಲು ಕೋರಿರುತ್ತಾರೆ. ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:15–9–1998ರ ನಡವಳಿಗಳ ವಿಷಯದ ಸಂಖ್ಯೆ:172(98–99) ಈಗಾಗಲೇ ಮೀಸಲಾಗಿರುವ ಸೇವಾ ಶುಲ್ಕವನ್ನು ಮನ್ನಾ ಮಾಡಲು ಸಾಧ್ಯವಿಲ್ಲವೆಂದು ಈ ಕಛೇರಿಯ ದಿ:7–7–1999ರ ಸೂಚನಾ ಪತ್ರದ ಮೇರೆಗೆ ಸದರಿ ಸಂಸ್ಥೆಯವರಿಗೆ ತಿಳಿಸಲಾಗಿರುತ್ತದೆ.

ಸರ್ಕಾರದ ಆದೇಶದ ಸಂಖ್ಯೆ.ನ.ಅ.ಇ 494 93 ದಿನಾಂಕ:20–4–2001ರಂತೆ ಬೆಂಗಳೂರು ನಗರಪಾಲಿಕೆ ರಾಜಾಜಿನಗರ ವಾಣಿಜ್ಯ ಸಂಕೀರ್ಣದ ಮೊದಲನೇ ಅಂತಸ್ತಿನಲ್ಲಿರುವ ಮಳಿಗೆ ಸಂಖ್ಯೆ:54 ರಿಂದ 106ರವರೆಗಿನ ಜಿಂದಾಲ್ ಮೆಡಿಕಲ್ ರವರಿಗೆ ಉಚಿತ ಆಸ್ಪತ್ರೆ ನಡೆಸಲು ಚದರ ಅಡಿ 1ಕ್ಕೆ ರೂ.2.00ರಂತೆ ಮಾಸಿಕ ರೂ.15,000/–ಗಳ ಪರವಾನಗಿ ಶುಲ್ಕದ ಮೇರೆಗೆ ಮತ್ತು ಪ್ರತಿ ಮೂರು ವರ್ಷಕ್ಕೊಮ್ಮೆ ಪರವಾನಗಿ ಶುಲ್ಕವನ್ನು ಶೇಕಡ 10%ರಷ್ಟು ಹೆಚ್ಚಿಸುವ ಬೆಂಗಳೂರು

ಮಹಾನಗರ ಪಾಲಿಕೆಯ ದಿ:21–12–1988ರ ನಿರ್ಣಯದ ಸಂಖ್ಯೆ:12(147)ನ್ನು ಕೆ.ಎಂ.ಸಿ ಕಾಯ್ದೆ 1976ರ ಪ್ರಕಾರ ಈ ಕೆಳಕಂಡ ಷರತ್ತುಗೊಳಪಟ್ಟ ಸ್ವೀಕರಿಸಿ ಸರ್ಕಾರವು ಸಮ್ಮತಿ ನೀಡಿರುತ್ತದೆ.

ಸದರಿ ಗುತ್ತಿಗೆ ಅವದಿಯನ್ನು ದಿ:31–3–2002ರ ನಂತರ ಮೆ:ಜಿಂದಾಲ್ ಮೆಡಿಕಲ್ ರಿಲೀಫ್ ಸೊಸೈಟಿರವರಿಗೆ ಮುಂದುವರೆಸುವುದಾದರೆ ಮಹಾನಗರ ಪಾಲಿಕೆಯ ನೀಡುವ ರಿಯಾಯಿತಿಯು ಮಾರುಕಟ್ಟೆ ದರಕ್ಕೆ ಶೇ.25% ನ್ನು ಮೀರಬಾರದು ಅಂದರೆ ಮಾರುಕಟ್ಟೆ ದರಕ್ಕೆ ಶೆಕಡ 25% ಮಾತ್ರ ರಿಯಾಯಿತಿ ನೀಡತಕ್ಕದ್ದು.

ದಿ:23–5–2007 ರಂದು ನಡೆದ ಮಹಾನಗರ ಪಾಲಿಕೆಯ ಸಭೆಯ ನಡವಳಿಗಳ ವಿಷಯದ ಸಂಖ್ಯೆ:20(19)ರಂತೆ, ಪ್ರತಿ ತಿಂಗಳಿಗೆ ರೂ.31,383/– ಗಳಂತೆ ನಿಗಧಿಪಡಿಸಿ 5 ವರ್ಷಗಳ ಅವಧಿಗೆ ಗುತ್ತಿಗೆಯನ್ನು ದಿ:1–4–2002 ರಿಂದ ಅನ್ವಯವಾಗುವಂತೆ ನವೀಕರಿಸಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ಈ ಕಛೇರಿಯಿಂದ ದಿ: 12–6–2002 ರಂದು ಕಛೇರಿ ಆದೇಶದಂತೆ ದಿ: 1–4–2002 ರಿಂದ 31–3–2007ರವರೆಗೆ 5 ವರ್ಷಗಳ ಅವದಿಗೆ ಮಾಸಿಕ ರೂ. 31,383/– ಪರವಾನಗಿ ಶುಲ್ಕ ನಿಗಧಿಪಡಿಸಿ, ಗುತ್ತಿಗೆ ನವೀಕರಿಸಲಾಗಿರುತ್ತದೆ.

ದಿ: 31–10–2006 ರಂದು ನಡೆದ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ನಡವಳಿಗಳ ವಿಷಯದ ಸಂಖ್ಯೆ:2(308)ರಂತೆ ಮೆ:ಜಿಂದಾಲ್ ಚಾರಿಟಬಲ್ ಆಸ್ಪತ್ರೆಯವರಿಗೆ ದಿನಾಂಕ:1–4–2007 ರಿಂದ ಮುಂದಿನ 3 ವರ್ಷಗಳ ಅವಧಿಗೆ ವಿಸ್ತರಿಸಿ ಪರವಾನಗಿ ಶುಲ್ಕವನ್ನು ಚದರ ಅಡಿ 10/–ರಂತೆ ನಿಗಧಿಪಡಿಸುವ ಬಗ್ಗೆ ಮಾನ್ಯ ಆಯುಕ್ತರವರ ದಿ:28–8–2006ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೋಟಗಾರಿಕೆ ಮತ್ತು ಮಾರುಕಟ್ಟೆ ಸ್ಥಾಯಿ ಸಮಿತಿ ದಿ:13–10–2006ರ ನಿರ್ಣಯ ಹಾಗೂ ಒಪ್ಪಿರುವ ತೆರಿಗೆ ಮತ್ತು ಆಥಿಕ ಸ್ಥಾಯಿ ಸಮಿತಿ ದಿ:26–10–2006ರ ನಿರ್ಣಯಗಳನ್ನು ಒಪ್ಪಿ ತೀರ್ಮಾನಿಸಿರುವ ಮೇರೆಗೆ ಈ ಕಛೇರಿಯಿಂದ ದಿ:20–12–2006 ರಂದು ಸದರಿ ಸಂಸ್ಥೆಯವರಿಗೆ ದಿನಾಂಕ:1–4–2007 ರಿಂದ 31–3–2010ರವರೆಗೆ ಅನ್ವಯವಾಗುವಂತೆ 3 ವರ್ಷ ಅವಧಿಗೆ ಗುತ್ತಿಗೆಯನ್ನು ಮುಂದುವರೆಸಿ ದಿ:1–4–2007 ರಿಂದ ಅನ್ವಯವಾಗುವಂತೆ ಪರವಾನಗಿ ಶುಲ್ಕವನ್ನು ಮಾಹೆಯಾನ ರೂ.69740/–ರಳಿಗೆ ನಿಧಿಪಡಿಸಿದ್ದು, ಅದರಂತೆ ಶುಲ್ಕ ಪಾವತಿಸಲು ಸೂಚಿಸಲಾಗಿರುತ್ತದೆ.

ಸದರಿ ಸಂಸ್ಥೆಯವರು ದಿನಾಂಕ:1–4–2007 ರಿಂದ 31–3–2010ರ ವರೆಗೆ ಪ್ರತಿ ಮಾಹೆ ರೂ.69740/–ರ ಬದಲಾಗಿ ರೂ. 25000/–ಗಳ ಪರವಾನಗಿ ಶುಲ್ಕವನ್ನು ಪಾವತಿ ಮಾಡುತ್ತಾ ಬಂದಿದ್ದು, ಈ ಸಂಬಂಧ ಪಾಲಿಕೆ ದಿ:31–10–2006ರ ತೀರ್ಮಾನದಂತೆ ಮಾಸಿಕ ರೂ.69740/–ರಂತೆ ಪರವಾನಗಿ ಶುಲ್ಕವನ್ನು ಪಾವತಿ ಮಾಡಲು ಈ ಕಛೇರಿಯಿಂದ ಹಲವಾರು ಸೂಚನಾ ಪತ್ರಗಳನ್ನು ನೀಡಿದ್ದರೂ ಸಹ ಸದರಿ ಸಂಸ್ಥೆಯವರು ಬಾಕಿ ಇರುವ ಪರವಾನಗಿ ಶುಲ್ಕವನ್ನು ಮನ್ನಾ ಮಾಡಿ ದಿನಾಂಕ:1–4–2010 ರಿಂದ 30 ವರ್ಷಗಳ ಅವಧಿಗೆ ಮಾಸಿಕ ರೂ.25,000/–ರಂತೆ ನಿಗಧಿಪಡಿಸಿ ಗುತ್ತಿಗೆಯ ಅವಧಿಯನ್ನು ನವೀಕರಿಸಬೇಕೆಂದು ಕೋರಿರುತ್ತಾರೆ.

ಸದರಿ ಸಂಸ್ಥೆಯವರು ದಿನಾಂಕ:31–3–2010ಕ್ಕೆ ಇರುವಂತೆ ಪರವಾನಗಿ ಶುಲ್ಕ ಹಾಗೂ ರೂ.22,89,121/– ಹಾಗೂ ಕೇಂದ್ರ ಸೇವಾ ಶುಲ್ಕ 78080/– ಒಟ್ಟು ರೂ. 23,67,801/–ಗಳು ಬಾಕಿ ಇದ್ದು, ಸದರಿ ಬಾಕಿ ಹಣವನ್ನು ಶೇ.18% ದಂಡದೊಂದಿಗೆ ಪಾವತಿಸಲು ಈ ಕಛೇರಿಯಿಂದ ದಿನಾಂಕ:30–8–2010 ಮತ್ತು ದಿನಾಂಕ: 29–9–2010 ಹಿಂಬರಹವನ್ನು ಹಾಗೂ ದಿನಾಂಕ:25–10–2010ರಂದು ಅಂತಿಮ ಹಿಂಬರಹ ನೀಡಲಾಗಿರುತ್ತದೆ.

ಸದರಿ ಸಂಸ್ಥೆಯವರು ಮಾರುಕಟ್ಟೆ ಸ್ಥಾಯಿ ಸಮಿತಿಗೆ ಮನವಿಯನ್ನು ಸಲ್ಲಿಸಿ, ಈ ಹಿಂದೆ ನಿಗಧಿಪಡಿಸಿರುವ ಮಾಸಿಕ ರೂ.69740/– ಪರವಾನಗಿ ಶುಲ್ಕ ಅಧಿಕವಾಗಿದ್ದು, ಸದರಿ ಮೊತ್ತವನ್ನು ಮಾಸಿಕ ರೂ.25000/–ಗಳಂತೆ ನಿಗಧಿಪಡಿಸಲು ಕೋರಿದ್ದು, ಮಾನ್ಯ ಅಧ್ಯಕ್ಷರು ಮಾರುಕಟ್ಟೆ ಸ್ಥಾಯಿ ಸಮಿತಿರವರು ಪೂರ ಕಡತವನ್ನು ಸಮಿತಿಯ ಮುಂದೆ ಮಂಡಿಸಲು ದಿ:16–12–2010ರ ಪತ್ರದಲ್ಲಿ ಕೋರಿರುವ ಮೇರೆಗೆ ಸಂಪೂರ್ಣ ಮಾಹಿತಿಯೊಂದಿಗೆ ಕಡತವನ್ನು ಮಾರುಕಟ್ಟೆ ಸ್ಥಾಯಿ ಸಮಿತಿಗೆ ಸಲ್ಲಿಸಲಾಗಿದ್ದು, ದಿನಾಂಕ:3–3–2011 ರಂದು ಮಾನ್ಯ ಅಧ್ಯಕ್ಷರು, ಸ್ಥಾಯಿ ಸಮಿತಿ ರವರು ಮಾನ್ಯ ಆಯುಕ್ತರವರಿಗೆ ಬರೆದಿರುವ ಪತ್ರದಲ್ಲಿ ಪೂರ್ತಿ ಕಡತವನ್ನು ಸಮಿತಿಗೆ ತರಿಸಿಕೊಂಡು ಪರಿಶೀಲಿಸಲಾಗಿ, ಮಾಸಿಕ ಬಾಡಿಗೆ ಬಗ್ಗೆ ಪ್ರಸ್ಥಾಪಿತ ಪ್ರಕರಣ ಹಿನ್ನೆಲೆಯಲ್ಲಿ ಸದರಿ ಕಡತವನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಬೇಕಾಗಿರುವುದರಿಂದ ಸೂಕ್ತ ಟಿಪ್ಪಣಿಯೊಂದಿಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಮಂಡಿಸಲು ಕೋರಿ ಕಡತವನ್ನು ಹಿಂದಿರುಗಿಸಿರುತ್ತಾರೆ.

ದಿ:31–10–2006ರ ಮಹಾನಗರ ಪಾಲಿಕೆ ಸಭೆಯ ತೀರ್ಮಾನದಂತೆ ಚದರ ಅಡಿ 10 ರಂತೆ ಒಟ್ಟು ಮಾಸಿಕ ಪರವಾನಗಿ ಶುಲ್ಕ ರೂ.69740/– ರಂತೆ ದಿನಾಂಕ:1–4–2007 ರಿಂದ 31–3–2010ರವರೆಗೆ ಪರವಾನಗಿ ಶುಲ್ಕವನ್ನು ಪಾವತಿಸಬೇಕಾಗಿದ್ದು, ಆದರೆ ಮೆ: ಜಿಂದಾಲ್ ಸಂಸ್ಥೆಯವರು ಮಾಸಿಕೆ ರೂ.25000/ಗಳಂತೆ ಪರವಾನಗಿ ಶುಲ್ಕವನ್ನು

ಪಾವತಿ ಮಾಡುತ್ತಿದ್ದು, ಸದರಿಯವರು ಕೋರಿರುವಂತೆ ಬಾಕಿ ಇರುವ ರೂ.23,67,801/– ಪರವಾನಗಿ ಶುಲ್ಕವನ್ನು ಮನ್ನಾ ಮಾಡಿ ದಿ: 1–4–2010 ರಿಂದ ಮುಂದಿನ 30 ವರ್ಷಗಳ ಅವಧಿಗೆ ಪರವಾನಗಿಯನ್ನು ನವೀಕರಿಸಲು ಕೋರಿದ್ದು, ಈ ಬಗ್ಗೆ ಮುಂದಿನ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರಿಗೆ ಮಂಡಿಸಿರುವ ಟಿಪ್ಪಣಿ.

<u>ನಿರ್ಣಯ :–</u> **<u>ಮೆ॥. ಜಿಂದಾಲ್ ಚಾರಿಟಬಲ್ ಆಸ್ಪತ್ರೆಯು ಯಾವುದೇ ಆದಾಯವಿಲ್ಲದೆ ಬಡವರಿಗೆ ಹಾಗೂ ಮದ್ಯಮ ವರ್ಗದವರಿಗೆ ಉಚಿತವಾಗಿ ಆರೋಗ್ಯ ತಪಾಸಣೆ ನಡೆಸಿ ಔಷಧಿಗಳನ್ನು ನೀಡುತ್ತಿರುವುದಾಗಿ, ಉತ್ತಮ ರೀತಿಯಲ್ಲಿ ಸಮಾಜ ಸೇವೆ ಮಾಡುತ್ತಿರುವುದಾಗಿ ಮೆ॥. ಜಿಂದಾಲ್ ಸಂಸ್ಥೆಯವರು, ದಿನಾಂಕ : 31–10–2006ರ ಪಾಲಿಕೆಯ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ವಿಧಿಸಿರುವ ಪರವಾನಗಿ ಶುಲ್ಕವು ಅತೀ ಹೆಚ್ಚಾಗಿ ಇರುವುದಾಗಿ ತಿಳಿಸಿ 01–04–2007 ರಿಂದ 31–03–2010ರ ವರೆಗೆ ಬಾಕಿ ಇರುವ ಪರವಾನಗಿ ಶುಲ್ಕ ರೂ.23,67,801/– (ಇಪ್ಪತ್ತಮೂರು ಲಕ್ಷ ಆರವತ್ತೇಳು ಸಾವಿರದ ಎಂಟು ನೂರು ಒಂದು ಮಾತ್ರ) ಗಳನ್ನು ಮನ್ನಾ ಮಾಡಲು ಹಾಗೂ ಮುಂದಿನ ಅವಧಿಗೆ ಪರವಾನಗಿಯನ್ನು ನವಿಕರಿಸಲು ಕೋರಿರುವ ಬಗ್ಗೆ ದಿನಾಂಕ : 14–06–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ವಿಷಯವನ್ನು ಪಾಲಿಕೆಯ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.</u>**

## <u>*07]. ವಿಷಯದ ಸಂಖ್ಯೆ :–ತೆಆಸ್ಥಾಸ/110/2011–12*</u>

ಆಯುಕ್ತರ ಟಿಪ್ಪಣಿ ದಿನಾಂಕ : 20–06–2011ರಲ್ಲಿ ವಿವರಿಸಿರುವಂತೆ, ಕಾರ್ಯದರ್ಶಿ ಸೇವಾ ಸಂಘದವರು ಬಸವರಾಜ ಗಲ್ಲಿಯಲ್ಲಿರುವ $\frac{10 + 16 \times 30}{2}$ ಅಡಿಗಳ ನಗರ ಪಾಲಿಕೆ ಜಾಗದ ಗುತ್ತಿಗೆ ಅವಧಿಯನ್ನು ನವೀಕರಿಸಲು ಕೋರಿರುತ್ತಾರೆ.ಸದರಿ ಗುತ್ತಿಗೆಯ ಬಗ್ಗೆ 1976 ರ ಕೆ.ಪಿ.ಪಿ. ಆಕ್ಟ್ ನಿಯಮ 4(1) ರ ರೀತ್ಯಾ ದಿನಾಂಕ: 09.08.2010 ರಂದು ಬಸವರಾಜ ಗಲ್ಲಿಯಲ್ಲಿರುವ $\frac{10 + 16 \times 30}{2}$ ಅಡಿಗಳ ಜಾಗದಲ್ಲಿ ಶಾಲೆ ನಡೆಸುತ್ತಿದ್ದು, ಗುತ್ತಿಗೆ ಅವಧಿಯನ್ನು ನವೀಕರಿಸಿ ಕೊಳ್ಳದೆ ಅನಧಿಕೃತವಾಗಿ ನಡೆಸುತ್ತಿರುವ ಮೇರೆಗೆ ನೋಟಿಸ್ ಜಾರಿ ಮಾಡಲಾಗಿತ್ತು.

ಸದರಿ ಗುತ್ತಿಗೆ ಜಾಗವನ್ನು 03.01.1960 ರಲ್ಲಿ No. Blo.PR.78/60-61 ರ ಆದೇಶದಂತೆ ತಿಂಗಳಿಗೆ ರೂ. 1/– ರಂತೆ 25 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲಾಗಿದೆ. ಸದರಿಯವರು ರೂ. 1/– ರಂತೆ 1990 ರವರೆಗೆ ಬಾಡಿಗೆಯನ್ನು ಪಾವತಿ ಮಾಡಿರುತ್ತಾರೆ. ನಂತರ ಪಾವತಿ ಮಾಡಿರುವುದಿಲ್ಲ ಈ ತಹಲ್ ವರೆವಿಗೂ ರೂ. 120/– ರಂತೆ ಬಾಕಿ ಇರುತ್ತದೆ.

ಆದ್ದರಿಂದ ಬಾಕಿ ಇರುವ ಗುತ್ತಿಗೆ ಹಣವನ್ನು ಪಾವತಿಸಿಕೊಂಡು ಗುತ್ತಿಗೆ ಅವಧಿಯನ್ನು ನವೀಕರಿಸಬಹುದೇ ಅಥವಾ ನಗರ ಪಾಲಿಕೆ ಜಾಗವನ್ನು ತೆರವುಗೊಳಿಸಬಹುದೇ ಎಂಬ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

<u>ನಿರ್ಣಯ :–</u> **<u>ದಿನಾಂಕ : 20–06–2011ರ ಟಿಪ್ಪಣಿಯನ್ನು ಒಪ್ಪುತ್ತಾ, ಬಾಕಿ ಇರುವ ಗುತ್ತಿಗೆ ಹಣವನ್ನು ಪಾವತಿಸಿಕೊಂಡು, ನಂತರ ನಿಯಮಾನುಸಾರ ಗುತ್ತಿಗೆ ನವೀಕರಿಸುವ ಬಗ್ಗೆ ಸಮಿತಿಯ ಮುಂದೆ ಟಿಪ್ಪಣಿ ಮಂಡಿಸುವುದೆಂದು ಸಮಿತಿಯು ತೀರ್ಮಾನಿಸಿತು.</u>**

## <u>*08]. ವಿಷಯದ ಸಂಖ್ಯೆ :–ತೆಆಸ್ಥಾಸ/111/2011–12*</u>

ಆಯುಕ್ತರ ಟಿಪ್ಪಣಿ ದಿನಾಂಕ : 20–06–2011ರಲ್ಲಿ ವಿವರಿಸಿರುವಂತೆ, ಶ್ರೀ. ಎಂ. ಪ್ರಭಾಕರ್, 26ನೇ ಅಡ್ಡರಸ್ತೆ, ಕಿಲಾರಿ ರಸ್ತೆ, ವಾರ್ಡ್–109ರ ವ್ಯಾಪ್ತಿಯಲ್ಲಿ ಬರುವ ನಗರ ಪಾಲಿಕೆಯ ಜಾಗವಾದ 182 ಚದರ ಅಡಿಗಳ ಜಾಗವನ್ನು 5 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಿದ್ದು ಗುತ್ತಿಗೆ ಅವಧಿಯು ದಿನಾಂಕ

: 14–03–1995 ಕ್ಕೆ ಮುಕ್ತಾಯಗೊಂಡಿರುತ್ತದೆ. ಗುತ್ತಿಗೆ ಅವಧಿಯನ್ನು ನವೀಕರಿಸಿಕೊಳ್ಳದೇ ಅನಧಿಕೃತವಾಗಿ ಕಟ್ಟಡವನ್ನು ಉಪಯೋಗಿಸುತ್ತಿರುತ್ತಾರೆ.

ಸದರಿಯವರಿಗೆ ದಿನಾಂಕ : 15–03–1990 ರಿಂದ 5ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಮಸಿಕ ರೂ.1000/– ರಂತೆ ಬಾಡಿಗೆ ನೀಡುವ ಷರತ್ತಿನಂತೆ ಗುತ್ತಿಗೆಗೆ ನೀಡಲಾಗಿದ್ದ 5 ವರ್ಷಗಳ ಗುತ್ತಿಗೆ ಅವಧಿ ಮುಗಿದ ನಂತರ ನವೀಕರಣಗೊಂಡಿಲ್ಲದ ಕಾರಣ ಅನಧಿಕೃತವೆಂದು ಭಾವಿಸಿ 1974 ರ ಕೆ.ಪಿ.ಪಿ ಆಕ್ಟ್ 4(1) ರ ರೀತ್ಯಾ ನೋಟಿಸನ್ನು ಜಾರಿ ಮಾಡಲಾಗಿದೆ.

ಮೇಲ್ಕಂಡ ಗುತ್ತಿಗೆಗೆ ನೀಡಿರುವ ನಗರ ಪಾಲಿಕೆಯ 182 ಚದರ ಅಡಿ ಜಾಗಕ್ಕೆ ನಿಗಧಿಪಡಿಸಿದ್ದ ವಾರ್ಷಿಕ ಗುತ್ತಿಗೆ ಮೊತ್ತ ರೂ.1000/– ರಂತೆ ದಿನಾಂಕ : 15–03–1990 ರಿಂದ 14–03–2011 ರ ವರೆಗೆ ರೂ. 16,000/– ಗಳು ಬಾಕಿ ಇರುತ್ತದೆ. ಈ ಮೊತ್ತವು ಗುತ್ತಿಗೆ ನವೀಕರಣಗೊಂಡಿಲ್ಲದ ಅವಧಿಯದಾಗಿರುತ್ತದೆ.

ಆದ್ದರಿಂದ ಬಾಕಿ ಇರುವ ಗುತ್ತಿಗೆ ಹಣವನ್ನು ಪಾವತಿಸಿಕೊಂಡು ಗುತ್ತಿಗೆ ಅವಧಿಯನ್ನು ನವೀಕರಿಸಬಹುದೇ ಅಥವಾ 182 ಚದರ ಅಡಿಗಳ ಜಾಗವನ್ನು ಮಹಾನಗರ ಪಾಲಿಕೆಯ ಸುಪರ್ದಿಗೆ ತೆಗೆದುಕೊಳ್ಳುವುದೇ ಅಥವಾ ಗುತ್ತಿಗೆದಾರರನ್ನು ತೆರವುಗೊಳಿಸಬಹುದೇ ಎಂಬ ಬಗ್ಗೆ ನಗರ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***–ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ–***

## ***09]. ವಿಷಯದ ಸಂಖ್ಯೆ :–ತೆಆಸ್ಥಾಸ/112/2011–12***

ಆಯುಕ್ತರ ಟಿಪ್ಪಣಿ ದಿನಾಂಕ : 20–06–2011ರಲ್ಲಿ ವಿವರಿಸಿರುವಂತೆ, ಗುತ್ತಿಗೆಯ ಬಗ್ಗೆ 1974 ರ ಕೆ.ಪಿ.ಪಿ ಕಾಯ್ದೆ 4(1) ರ ರೀತ್ಯಾ ದಿನಾಂಕ : 09–08–2010 ರಂದು ತೋಟದೇವರ ಗಲ್ಲಿಯಲ್ಲಿರುವ $9_{1/2} + \frac{13_{1/2}}{2} \times 36_{1/2}$ ನಗರ ಪಾಲಿಕೆ ಜಾಗದಲ್ಲಿ ಶಾಲೆ ನಡೆಸುತ್ತಿದ್ದು, ಗುತ್ತಿಗೆ ಜಾಗವನ್ನು ಅನಧಿಕೃತವಾಗಿ ನಡೆಸುತ್ತಿರುವ ಮೇರೆಗೆ ನೋಟಿಸ್ ಜಾರಿ ಮಾಡಲಾಗಿತ್ತು. ನೋಟಿಸ್‌ಗೆ ಅರ್ಜಿದಾರರು ಯಾವುದೇ ಉತ್ತರ ನೀಡಿರುವುದಿಲ್ಲ.

ಸದರಿ ಸ್ವತ್ತು ನ್ಯಾಯಾಲಯದಲ್ಲಿ ದಾವೆ ಇದ್ದು ಓ.ಎಸ್. ನಂ. 10674/2006 (ಕೆಂಪೇಗೌಡ ವಿದ್ಯಾಸಂಸ್ಥೆ) ಸದರಿ ದಾವೆಯು ವಜಾಗೊಂಡಿರುವ ಬಗ್ಗೆ ವಕೀಲರು ಸೂಚಿಸಿರುತ್ತಾರೆ. ಸದರಿ ಗುತ್ತಿಗೆ ಅವಧಿಯು 16–11–1976 ರಿಂದ 5 ವರ್ಷಗಳ ಅವಧಿಗೆ ತಿಂಗಳಿಗೆ ರೂ. 5/– ರಂತೆ ಗುತ್ತಿಗೆಗೆ ನೀಡಲಾಗಿತ್ತು. ಗುತ್ತಿಗೆ ಅವಧಿಯು ಮುಗಿದಿದ್ದು ಅನಧಿಕೃತವಾಗಿ ನಡೆಸುತ್ತಿರುತ್ತಾರೆ.

ಆದ್ದರಿಂದ ಬಾಕಿ ಇರುವ ಗುತ್ತಿಗೆ ಹಣವನ್ನು ಪಾವತಿಗೆ ಕೊಂಡು ನವೀಕರಿಸುವುದೇ ಅಥವಾ ನ್ಯಾಯಾಲಯದಲ್ಲಿ ವಜಾ ಆಗಿರುವ ಕಾರಣ ನಗರ ಪಾಲಿಕೆ ಜಾಗವನ್ನು ತೆರವುಗೊಳಿಸುವುದೇ ಎಂಬ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ :–** **ದಿನಾಂಕ : 20–06–2011ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಬಾಕಿ ಇರುವ ಗುತ್ತಿಗೆ ಹಣವನ್ನು ಪಾವತಿಸಿಕೊಂಡು ನಂತರ ನಿಯಮಾನುಸಾರ ಗುತ್ತಿಗೆ ನವೀಕರಿಸುವ ಬಗ್ಗೆ ಸಮಿತಿಯ ಮುಂದೆ ಟಿಪ್ಪಣಿ ಮಂಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## ***10]. ವಿಷಯದ ಸಂಖ್ಯೆ :–ತೆಆಸ್ಥಾಸ/113/2011–12***

ಆಯುಕ್ತರ ಟಿಪ್ಪಣಿ ದಿನಾಂಕ : 25–01–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 1079 ತೆರೆದ ಪ್ರದೇಶಗಳಿದ್ದು, ಅವುಗಳಲ್ಲಿ 778 ತೆರೆದ ಪ್ರದೇಶಗಳನ್ನು ಭೂವಿನ್ಯಾಸಗೊಳಿಸಿ

ಉದ್ಯಾನವನಗಳನ್ನಾಗಿ ಅಭಿವೃದ್ಧಿ ಪಡಿಸಲಾಗಿದೆ. ಉಳಿದ 301 ತೆರೆದ ಪ್ರದೇಶಗಳನ್ನು ಉದ್ಯಾನವನಗಳನ್ನಾಗಿ ಅಭಿವೃದ್ಧಿ ಪಡಿಸಬೇಕಾಗಿದೆ. ಪಾಲಿಕೆಯ ತೋಟಗಾರಿಕೆ ವಿಭಾಗದಲ್ಲಿ ಉದ್ಯಾನವನಗಳ ನಿರ್ವಹಣೆ ಮಾಡಲು ಸಿಬ್ಬಂದಿ ಕೊರತೆ ಇರುವುದರಿಂದ ಅಭಿವೃದ್ಧಿ ಪಡಿಸಿರುವ 778 ಉದ್ಯಾನವನಗಳಲ್ಲಿ 33 ಉದ್ಯಾನವನಗಳನ್ನು ದತ್ತು ನೀಡಲಾಗಿದೆ. 138 ಉದ್ಯಾನವನಗಳನ್ನು ಇಲಾಖೆ ವತಿಯಿಂದ ನಿರ್ವಹಣೆ ಮಾಡಲಾಗುತ್ತಿದೆ. ಉಳಿದ 607 ಉದ್ಯಾನವನಗಳನ್ನು ಗುತ್ತಿಗೆ ಆಧಾರದ ಮೇಲೆ ನಿರ್ವಹಣೆ ಮಾಡಲಾಗುತ್ತಿದೆ.

2010–11ನೇ ಸಾಲಿನ ಆಯವ್ಯಯ ಅಂದಾಜುಗಳ ಪುಸ್ತಕದ ಪುಟ 68 ರಲ್ಲಿ ಗುತ್ತಿಗೆ ಆಧಾರದ ಮೇಲೆ ಉದ್ಯಾನವನಗಳ ನಿರ್ವಹಣೆಯಡಿ (P0088) ಬಾಕಿ ಬಿಲ್ಲುಗಳ ಹೊಣೆಗಾರಿಕೆಗೆ (Pending Bills) ರೂ.1337.28 ಲಕ್ಷ ಮತ್ತು ಮುಂದುವರೆದ ಕಾಮಗಾರಿಗಳಿಗೆ (Spill Over Works) ರೂ.1157.70 ಲಕ್ಷಗಳು ಹಾಗೂ ಚಾಲ್ತಿ ಕಾಮಗಾರಿಗಳಿಗೆ (Current Works) ಕೇವಲ ರೂ.500.00 ಲಕ್ಷಗಳನ್ನು ಮಾತ್ರ ನಿಗಧಿಪಡಿಸಲಾಗಿದೆ. ಒಟ್ಟು ರೂ.2994.98 ಲಕ್ಷಗಳ ಅನುದಾನವನ್ನು ನಿಗಧಿಪಡಿಸಲಾಗಿದೆ.

ಚಾಲ್ತಿ ಕಾಮಗಾರಿಗಳಿಗೆ (Current Works) ನಿಗಧಿಪಡಿಸಲಾದ ರೂ.500.00 ಲಕ್ಷಗಳ ಅನುದಾನದಲ್ಲಿ ಉದ್ಯಾನವನಗಳ ನಿರ್ವಹಣೆ ಮಾಡುವುದು ಬಹಳ ಕಷ್ಟಕರವಾಗಿದೆ. ಆದ್ದರಿಂದ, ಬಾಕಿ ಬಿಲ್ಲುಗಳ ನಿರ್ವಹಣೆಗೆ (Pending Bills) ನಿಗಧಿಪಡಿಸಿರುವ ಅನುದಾನ ರೂ.1337.28 ಲಕ್ಷ ಮತ್ತು ಮುಂದುವರೆದ ಕಾಮಗಾರಿಗಳಿಗೆ (Spill Over Works) ನಿಗಧಿಪಡಿಸಿರುವ ಅನುದಾನ ರೂ.1157.70 ಲಕ್ಷ ಒಟ್ಟು ರೂ.2494.98 ಲಕ್ಷಗಳು 2010–11ನೇ ಸಾಲಿಗೆ ಅವಶ್ಯಕತೆ ಇರುವುದಿಲ್ಲ.

ಈ ಹಿನ್ನೆಲೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಉದ್ಯಾನವನಗಳ ನಿರ್ವಹಣೆಯಡಿ (P0088) ಲೆಕ್ಕ ಶೀರ್ಷಿಕೆಯಡಿ ನಿಗಧಿಪಡಿಸಿರುವ ಒಟ್ಟು 2494.98 ಲಕ್ಷಗಳ ಅನುದಾನದಲ್ಲಿ ದಿನಾಂಕ:01–4–2010 ರಿಂದ 30–11–2010 ರವರೆಗೆ ರೂ.1565.52 ಲಕ್ಷಗಳು ಖರ್ಚಾಗಿರುತ್ತವೆ. ಖರ್ಚಾಗಿರುವ ವಿವರವನ್ನು ಪುಟ 6–7 ರಲ್ಲಿ ಸಲ್ಲಿಸಲಾಗಿದೆ. ಆದ್ದರಿಂದ, ಉಳಿಕೆ ಅನುದಾನ ರೂ.1429.46 ಲಕ್ಷಗಳ ಅನುದಾನವನ್ನು (2994.98–1565.52=1429.46ಲಕ್ಷಗಳು) 2010–11ನೇ ಸಾಲಿಗೆ ಚಾಲ್ತಿ ಕಾಮಗಾರಿಗಳಿಗೆ (Current Works) ಮರು ಹೊಂದಾಣಿಕೆ (Re-appropriation) ಮಾಡಿಕೊಡಬಹುದೆಂದು ಆಯುಕ್ತರು ಅಭಿಪ್ರಾಯಿಸಿದೆಯೆಂದು ತಿಳಿಸಿದ್ದು, ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ ಮಂಡಿಸಲಾದ ಆಯುಕ್ತರ ದಿನಾಂಕ : 25–01–2011 ರ ಟಿಪ್ಪಣಿಯನ್ನು ಒಪ್ಪುತ್ತಾ, 2010–11 ನೇ ಸಾಲಿನ ಚಾಲ್ತಿ ಕಾಮಗಾರಿಗಳಿಗೆ ಮರು ಹೊಂದಾಣಿಕೆ ಮಾಡಿ ಕೊಡ ಬಹುದೆಂದು ಅಭಿಪ್ರಾಯಿಸಿದ ಉಳಿಕೆ ಅನುದಾನ ರೂ. 1429.46ಲಕ್ಷಗಳಲ್ಲಿ 429.46ಲಕ್ಷಗಳನ್ನು 2010–11 ನೇ ಸಾಲಿನ ಉದ್ಯಾನವನ ನಿರ್ವಹಣೆಗೆ ಕಾಯ್ದಿರಿಸಿ, ಉಳಿಕೆ 10.00ಕೋಟಿಗಳ ಅನುದಾನವನ್ನು ಈ ಕೆಳಕಂಡ ವಾರ್ಡ್‌ಗಳಲ್ಲಿ ಬರುವ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು ಹಾಗೂ ಪಾಲಿಕೆಯ ಹೊಸ ವಾರ್ಡ್‌ಗಳಲ್ಲಿ ಬರುವ ಸಿ.ಎ.ನಿವೇಶನ, ಆಟದ ಮೈದಾನ, ಉದ್ಯಾನವನದ ಜಾಗವನ್ನು ಭೂಗಳ್ಳರಿಂದ ರಕ್ಷಿಸಿಕೊಳ್ಳಲು ಉದ್ಯಾನವನಗಳಿಗೆ ತಂತಿಬೇಲಿ ಮತ್ತು ಗ್ರಿಲ್‌ಗಳನ್ನು ಅಳವಡಿಸಿ ಅಭಿವೃದ್ಧಿಗೊಳಿಸಲು ಸಮಿತಿಯು ಈ ರೀತಿ ನಿರ್ಣಯ ತೆಗೆದುಕೊಂಡಿರುತ್ತದೆ.

| **ವಾರ್ಡ್ ನಂ.** | **ಕಾಯ್ದಿರಿಸಿರುವ ಅನುದಾನ** |
|---|---|
| **159** | ರೂ. 2.50 ಕೋಟಿ |
| **112** | ರೂ.75.00 ಲಕ್ಷಗಳು |
| **19** | ರೂ.75.00 ಲಕ್ಷಗಳು |
| **125** | ರೂ.75.00 ಲಕ್ಷಗಳು |
| **14** | ರೂ.75.00 ಲಕ್ಷಗಳು |
| **70** | ರೂ.75.00 ಲಕ್ಷಗಳು |
| **68** | ರೂ.75.00 ಲಕ್ಷಗಳು |
| **115** | ರೂ.75.00 ಲಕ್ಷಗಳು |
| **77** | ರೂ.75.00 ಲಕ್ಷಗಳು |
| **73** | ರೂ.75.00 ಲಕ್ಷಗಳು |
| **139** | ರೂ.75.00 ಲಕ್ಷಗಳು |

ಈ ಮೇಲಿನ ವಾರ್ಡ್‌ಗಳಿಗೆ ಕಾಯ್ದಿರಿಸಿರುವ ಅನುದಾನವನ್ನು ಟೆಂಡರ್ ಕರೆದು, ಟೆಂಡರ್ ಪ್ರಕ್ರಿಯೆ ನಡೆಸುವ ಹಂತದಲ್ಲಿ, ಸ್ಥಳೀಯ ಪ್ರಭಾವಿ ಮುಖಂಡರುಗಳು ಸಿ.ಎ.ನಿವೇಶನ, ಅಟದ ಮೈದಾನ, ಉದ್ಯಾನವನಕ್ಕೆ ಕಾಯ್ದಿರಿಸಿರುವ ಜಾಗವನ್ನು ಕಬಳಿಸಲು ಯತ್ನಿಸಿ, ಕೋರ್ಟ್, ಕಛೇರಿಯಲ್ಲಿ ದಾವೆ ಹೂಡುವ ಸಂಭವ ಬರುವ ಪ್ರಯುಕ್ತ, ಮೇಲಿನ ವಾರ್ಡ್‌ಗಳ ಅನುದಾನವನ್ನು ಕೆಆರ್‌ಐಡಿಎಲ್ ಸಂಸ್ಥೆಯಿಂದ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು ತೀರ್ಮಾನಿಸಿರುವ ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ :16–06–2011ರ ನಿರ್ಣಯ.

***ನಿರ್ಣಯ :– ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ : 16–06–2011ರ ನಿರ್ಣಯವನ್ನು ಒಪ್ಪಿದೆ.***

## *11]. ವಿಷಯದ ಸಂಖ್ಯೆ :–ತೆಆಸ್ಥಾಸ/118/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 27–06–2011ರಲ್ಲಿ ವಿವರಿಸಿರುವಂತೆ, ಶ್ರೀಮತಿ.ಎಸ್.ಆಸಾಸುರೇಶ್ ಮಾನ್ಯ ನಗರಸಭಾ ಸದ್ಯಸರು ವಾರ್ಡ್ ನಂ.38 ರವರು ಉಲ್ಲೇಖಿತ ಪತ್ರಗಳಲ್ಲಿ ವಾರ್ಡ್ ನಂ.38 ರಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನ ನಿಗಧಿ ಪಡಿಸಲು ಕೋರಿರುತ್ತಾರೆ. ವಿವರ ಕೆಳಕಂಡಂತಿರುತ್ತದೆ.

| ಕ್ರಮ. ಸಂಖ್ಯೆ | ಕೋರಿಕೆ ಸಲ್ಲಿಸಿರುವರು | ಅನುದಾನ ಒದಗಿಸಲು ಕೋರಿರುವ ಉದ್ದೇಶ | ಮೊತ್ತ ರೂ. (ಲಕ್ಷಗಳಲ್ಲಿ) |
|---|---|---|---|
| 1 | ಶ್ರೀಮತಿ ಎಸ್. ಆಶಾಸುರೇಶ್ ಬೃಹತ್ ಬೆಂಗಳೂರು ಮಹಾನರ ಪಾಲಿಕೆ ಸದ್ಯಸರು ವಾರ್ಡ್ ನಂ.38, ಹೆಚ್.ಎಂ.ಟಿ | Providing Asphalting to roads in ward No.38<br>Providing Digital name boards for roads in ward No .38 | |
| 2 | ಶ್ರೀಮತಿ. ಎಸ್. ಆಶಾಸುರೇಶ್ ಬೃಹತ್ ಬೆಂಗಳೂರು ಮಹಾನರ ಪಾಲಿಕೆ ಸದ್ಯಸರು ವಾರ್ಡ್ ನಂ.38, ಹೆಚ್.ಎಂ.ಟಿ | ವಾರ್ಡ್ ನಂ.38ರ ವ್ಯಾಪ್ತಿಯಲ್ಲಿ ಆಟದ ಮೈದಾನ ನಿರ್ಮಿಸಲು ಅನುದಾನ ಬಿಡುಗಡೆ ಬಗ್ಗೆ. | 95.00 |
| 3 | ಶ್ರೀಮತಿ. ಎಸ್. ಆಶಾಸುರೇಶ್ ಬೃಹತ್ ಬೆಂಗಳೂರು ಮಹಾನರ ಪಾಲಿಕೆ ಸದ್ಯಸರು ವಾರ್ಡ್ ನಂ.38, ಹೆಚ್.ಎಂ.ಟಿ | 1. Construction of anganawadi, Tailoring and library Building in ward No .38.<br>2. Providing solar light system for SC/ST houses in ward No.38<br>3. Construction of Ambedkar Bhavan in Ward no.38<br>4. Construction of individual Toilets for SC/ST houses in ward no.38<br>5. Construction of SC/ST houses in ward no.38<br>6. Individual Water Connection to SC/ST | |

| | | | |
|---|---|---|---|
| | | Houses in ward no.38.<br>7. Improvements to SWD in ward no.38 | |
| 4 | ಶ್ರೀಮತಿ. ಎಸ್. ಆಶಾಸುರೇಶ್ ಬೃಹತ್ ಬೆಂಗಳೂರು ಮಹಾನರ ಪಾಲಿಕೆ ಸದ್ಯಸರು ವಾರ್ಡ್ ನಂ.38, ಹೆಚ್.ಎಂ.ಟಿ | 1. Construction of Vegetable market in ward no.38.<br>2. Construction of Hospital Building in ward no 38<br>3. Conducting state level tournaments<br>4. Improvements to footpath in ward no 38<br>5. Improvements to drains in ward no 38<br>6. Providing concrete roads in ward no 38<br>7. Drilling bore wells, Pipe line and UG tanks in ward no 38<br>8. Construction of Solid Waste management and recycling unit.<br>9. Improvements playground in ward no38<br>10. Providing Link road from SRS road<br>11. Providing street lights and new UG cables in ward no 38<br>12. Developments of parks in ward no38. | |

ಈ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :-*** ***ಆಯುಕ್ತರ ಟಿಪ್ಪಣಿ ದಿನಾಂಕ : 27-06-2011ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಕ್ರಮ ಸಂಖ್ಯೆ (2) ಎರಡು ಅಂದರೆ ವಾರ್ಡ್ ನಂ.38ರ ವ್ಯಾಪ್ತಿಯಲ್ಲಿ ಆಟದ ಮೈದಾನ ನಿರ್ಮಿಸಲು 2011-12ನೇ ಸಾಲಿನ ಆಯವ್ಯಯದಲ್ಲಿ ಒದಗಿಸುವ ಅನುದಾನದಲ್ಲಿ ಬಳಸಿಕೊಳ್ಳುವ ಷರತ್ತಿಗೆ ಒಳಪಡಿಸಿ ರೂ.95.00 ಲಕ್ಷಗಳನ್ನು (ರೂ.ತೊಂಬತ್ತೈದು ಲಕ್ಷಗಳನ್ನು) ಬಿಡುಗಡೆಗೊಳಿಸುವುದೆಂದು ಸಮಿತಿಯು ತೀರ್ಮಾನಿಸಿತು.***

## ***12]. ವಿಷಯದ ಸಂಖ್ಯೆ :-ತೆಆಸ್ಥಾಸ/119/2011-12***

ಆಯುಕ್ತರ ಟಿಪ್ಪಣಿ ದಿನಾಂಕ : 23-06-2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವರ್ಕರ್ಸ್ ಫೆಡರೇಷನ್-ದಂಡುಪ್ರದೇಶ, ಸದರಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳು ಸದರಿ ಸಂಘವು ಅಂಬೇಡ್ಕರ್ ಜಯಂತಿ, ಕನ್ನಡ ರಾಜ್ಯೋತ್ಸವ ಹಾಗೂ ವಿವಿಧ ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಚರಿಸುವ

ಪ್ರಯುಕ್ತ 2011–12ನೇ ಸಾಲಿನ ಆಯವ್ಯಯದಲ್ಲಿ ರೂ.20.00 ಲಕ್ಷ ಅನುದಾನ ಮೀಸಲಿಡಬೇಕೆಂದು ಕೋರಿರುತ್ತಾರೆ. ಈ ಬಗ್ಗೆ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***–ಮುಂದೂಡಿದೆ–***

## *13]. ವಿಷಯದ ಸಂಖ್ಯೆ :–ತೆಆಸ್ಥಾಸ/120/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)/ಪಿಆರ್/24/11–12, ದಿನಾಂಕ : 20–05–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:61 (91)ನೇ ವಾರ್ಡ್, ಪಾಪಣ್ಣ ಗಾರ್ಡನ್, ಬೋರ್‌ಟ್ಯಾಂಕ್ ರಸ್ತೆ, ಪಿ.ಕೆ.ಕಾಲೋನಿ, 4ನೇ ಅಡ್ಡರಸ್ತೆ, ಬೆಂಗಳೂರು ಇಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ವತ್ತಿನ ಸಂಖ್ಯೆ:01. 10X15 ಅಡಿ ಅಳತೆಯ ಸ್ವತ್ತನ್ನು ವಿಷಯದ ಸಂಖ್ಯೆ 81. ದಿನಾಂಕ: 30–05–1989ರ ಆಡಳಿತಗಾರರ ನಡವಳಿಕೆಗಳು ಮಾಸಿಕ 15/– ರೂ ನಂತೆ ದಿನಾಂಕ: 24.07.1989 ರಿಂದ 23.07.1992ರ ವರೆಗೆ 3ವರ್ಷಗಳ ಅವಧಿಗೆ ವಾಸದ ಉದ್ದೇಶಕ್ಕಾಗಿ ಗುತ್ತಿಗೆ ನೀಡಲಾಗಿದೆ.

ಗುತ್ತಿಗೆ ಅವಧಿ ಮುಕ್ತಾಯವಾದ ಕಾರಣ ಕೆ.ಎಂ.ಸಿ.ಕಾಯ್ದೆ 5(1)ರ ಅಡಿಯಲ್ಲಿ ದಿನಾಂಕ:17–11–2009 ರಂದು ನೋಟಿಸ್ ಜಾರಿ ಮಾಡಲಾಗಿದ್ದು, ಶ್ರೀ.ಆನಂದ್ ರವರು ದಿನಾಂಕ:30–06–1998 ರಂದು ಮರಣ ಹೊಂದಿದ್ದು, ಶ್ರೀ.ಆನಂದ್ ರವರ ತಂಗಿಯ ಮಗನಾದ ಶ್ರೀ.ಎಂ.ಜೆ.ವಿಕ್ಟರ್ ಎಂಬುವವರು ಅಂಗವಿಕಲರಾಗಿರುವುದಾಗಿ ತಿಳಿಸಿ ಮಾರುಕಟ್ಟೆ ದರದಲ್ಲಿ ಕ್ರಯಕ್ಕೆ ನೀಡಲು ಕೋರಿರುತ್ತಾರೆ. ಈ ಸಂಬಂಧ ಪಾಲಿಕೆ ಸದಸ್ಯರು ಸಹಾ ಶಿಫಾರಸ್ಸು ಮಾಡಿರುತ್ತಾರೆ.

ಆದರೆ ಕಂದಾಯ ಅಧಿಕಾರಿ (ಶಾಂತಿನಗರ) ರವರು ಶ್ರೀ.ಎಂ.ಜೆ.ವಿಕ್ಟರ್ ಇವರು ಅಂಗವಿಕಲರಾಗಿರುವುದರಿಂದ ಶ್ರೀ.ಆನಂದ್ ರವರ ಹೆಸರಿನಿಂದ ಶ್ರೀ.ಎಂ.ಜೆ.ವಿಕ್ಟರ್ ರವರ ಹೆಸರಿಗೆ ವರ್ಗಾಯಿಸಿ ಗುತ್ತಿಗೆ ಅವಧಿ ನವೀಕರಿಸಲು ಪ್ರಸ್ತಾವನೆ ಸಲ್ಲಿಸಿರುವುದನ್ನು ಮಾನ್ಯ ಆಯುಕ್ತರು ಒಪ್ಪಿ ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿ ಮಂಡಿಸಲು ಒಪ್ಪಿಗೆ ನೀಡಿರುತ್ತಾರೆ.

ಗುತ್ತಿಗೆ ವರ್ಗಾವಣೆ ಮಾಡಿ ನವೀಕರಿಸಲು ಪ್ರಸ್ತಾಪಿಸಿರುವ ಸ್ವತ್ತಿನ ವಿಸ್ತೀರ್ಣ 10X15 ಅಡಿಗಳಿರುವುದಾಗಿ ವರದಿ ಮಾಡಿದ್ದು, ಕರಾರು ಪತ್ರದ ನಕಲು ಪ್ರತಿಯಲ್ಲಿ 13.6X12 ಅಡಿಗಳಿರುವುದಾಗಿ ಹಾಗೂ ಎ.ಸಿ. ಶೀಟ್ ಮನೆ ಕಟ್ಟಿಕೊಂಡು ವಾಸಿಸುತ್ತಿರುವುದಾಗಿ ವರದಿಯಾಗಿರುವುದರಿಂದ ಹಾಲಿ ವಾಸಿಸುತ್ತಿರುವ ವಿಸ್ತೀರ್ಣ 163.2 ಚ.ಅಡಿ ಗಳಿಗೆ ಪ್ರಸಕ್ತ ಮಾರುಕಟ್ಟೆ ದರದಂತೆ ಚದರ ಅಡಿ 1ಕ್ಕೆ 2200/– ರೂಗಳಿದ್ದು, 2200X63.2 ಚದರ ಅಡಿ =3.59040= ರೂ ಗಳಾಗುತ್ತದೆ. ಮಾರುಕಟ್ಟೆ ದರವನ್ನು ಶೇ 10% ರಂತೆ ಪರಿಗಣಿಸಿದಾಗ ವಾರ್ಷಿಕ 35904=0ರೂ ಗಳಾಗುತ್ತದೆ. ಮಾಸಿಕ 2992/–ರೂಗಳಾಗುತ್ತದೆ.

ಆದ್ದರಿಂದ ಗುತ್ತಿಗೆ ಅವಧಿ ಮುಗಿದ ದಿನಾಂಕ:23–07–1992 ರಿಂದ ಹೊಸ ಗುತ್ತಿಗೆ ಕರಾರು ನೊಂದಾಯಿಸುವ ಹಿಂದಿನ ದಿನಾಂಕದವರೆವಿಗೆ ಹಳೆಯ ಗುತ್ತಿಗೆ ದರದಂತೆಯೂ ಕರಾರು ನೊಂದಾಯಿಸುವ ದಿನಾಂಕದಿಂದ ಪ್ರಸಕ್ತ ಮಾರುಕಟ್ಟೆ ದರದಂತೆ ದರ ನಿಗಧಿಪಡಿಸಿ 5 ವರ್ಷಗಳ ಅವಧಿಗೆ ಅನುಮೋದನೆ ಪಡೆಯುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ: 20–05–2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 07–06–2011 ನಿರ್ಣಯ.

ನಿರ್ಣಯ :– ***ಆಯುಕ್ತರ ದಿನಾಂಕ 20–05–2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 07–06–2011ರ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ಗುತ್ತಿಗೆ ಮೊತ್ತ ರೂ.600/– (ಆರುನೂರು) ಗಳಿಗೆ ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.***

***14]. ವಿಷಯದ ಸಂಖ್ಯೆ :–ತೆಆಸ್ಥಾಸ/121/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)/ಪಿ.ಆರ್/25/11–12 ದಿನಾಂಕ : 14–05–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕೆಂಪೇಗೌಡನಗರ ಉಪ ವಿಭಾಗದ ವಾರ್ಡ್ ಸಂಖ್ಯೆ:119(47) ನ್ಯೂ ಬಂಬೂ ಬಜಾರ್‌ನಲ್ಲಿರುವ ನಗರಪಾಲಿಕೆಯ 22X50 =1100 ಚದರಡಿ ಜಾಗವನ್ನು ದಿನಾಂಕ:12–08–1956 ರಿಂದ 12–ತಿಂಗಳ ಅವಧಿಗೆ ಮಾಸಿಕ ಗುತ್ತಿಗೆ ಹಣ ರೂ.6/– ರಂತೆ ನೀಡಿದ್ದು, ಸದರಿ ಗುತ್ತಿಗೆ ಅವಧಿ ಮುಗಿದಿರುತ್ತದೆ.

ಗುತ್ತಿಗೆದಾರರು ಗುತ್ತಿಗೆಯನ್ನು ನವೀಕರಿಸಿಕೊಂಡಿರುವುದಿಲ್ಲ. ಸದರಿ ಗುತ್ತಿಗೆ ಜಾಗವನ್ನು ನಗರಪಾಲಿಕೆ ಹಿಂದಿರುಗಿಸುವಂತೆ ನೋಟೀಸ್ ಜಾರಿ ಮಾಡಲಾಗಿರುತ್ತದೆ. ಈ ಬಗ್ಗೆ ಗುತ್ತಿಗೆದಾರರು ವಾರ್ಡ್ ಸಂಖ್ಯೆ:119ರ ನಗರಸಭಾ ಸದಸ್ಯರಿಗೆ ಪತ್ರ ಬರೆದು ಗುತ್ತಿಗೆ ನೀಡಿರುವ ಜಾಗವನ್ನು ಮಾರುಕಟ್ಟೆ ಬೆಲೆಗೆ ಕ್ರಯಕ್ಕೆ ನೀಡಲು ಕೋರಿ ಪತ್ರ ಬರೆದಿರುತ್ತಾರೆ.

ಮಾನ್ಯ ಅನಂತಕುಮಾರ್, ಸಂಸದರು ಮತ್ತು ವಾರ್ಡ್ ಸಂಖ್ಯೆ:119(47)ನೇ ನಗರಸಭಾ ಸದಸ್ಯರು ಪೂಜ್ಯ ಮಹಾಪೌರರಿಗೆ ಪತ್ರ ಬರೆದು ಮೇಲ್ಕಂಡ ಸ್ವತ್ತನ್ನು ಕ್ರಯಕ್ಕೆ ನೀಡಲು ಕೋರಿರುತ್ತಾರೆ.

ಶ್ರೀ ಕೋದಂಡರಾಮ ಭಜನಾ ಮಂದಿರ ಎಂಬುದಾಗಿ ನೊಂದಾಯಿಸಿಕೊಂಡು ದೇವಸ್ಥಾನ ನಿರ್ಮಿಸಿ, ನಿರ್ವಹಿಸಲಾಗುತ್ತಿದೆ. ಗುತ್ತಿಗೆ ಹಣವನ್ನು ಕಳೆದ ವರ್ಷದವರೆಗೆ ಸಂದಾಯ ಮಾಡಿರುತ್ತಾರೆ. ಆದುದರಿಂದ, ಸದರಿ ಸಂಘಕ್ಕೆ ಮುಂದಿನ 30–ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಬಹುದಾಗಿದೆ.

ಕರ್ನಾಟಕ ಮುನಿಸಿಪಲ್ ಕಾಯ್ದೆನ್ವಯ–1976 ಕಲಂ–176ರ (6) ಹಾಗೂ (ಬಿ)IIರ ಪ್ರಕಾರ ಸ್ಥಾಯಿ ಸಮಿತಿಗಳಿಗೆ 3 ವರ್ಷಗಳ ಅವಧಿಗೆ ಹಾಗೂ ಪಾಲಿಕೆ ಸಭೆಗೆ 5 ವರ್ಷಕ್ಕೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ. ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ(ಕಂ)/ ಪಿ.ಆರ್/115/01–02, ದಿ:01–03–2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆ ಕನಿಷ್ಟ ಶೇ:10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸಬೇಕಾಗಿರುತ್ತದೆ. ಶೇ:100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದಾಯಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಅಭಿಪ್ರಾಯಿಸಲಾಗಿದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:17–04–2007ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ರೂ.4,000/–ಗಳಿದ್ದು, ಅರ್ಜಿದಾರರುಗಳು ಕೋರಿರುವ 22X50 ಅಡಿಗಳ ಜಾಗವು 1100 ಚ.ಅಡಿಗಳಾಗುತ್ತದೆ. ಇದರಂತೆ 4000X1100 = 44,00,000/– ರೂ.ಗಳಾಗುತ್ತದೆ. ಶೇ:10%ರಷ್ಟು ವಾರ್ಷಿಕ ಗುತ್ತಿಗೆ ಹಣ 4,40,000/– ರೂ.ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣ 36,670/– ರೂ.ಗಳಾಗುತ್ತದೆ.

ಮೇಲಿನ ಹಿನ್ನೆಲೆಯಲ್ಲಿ ಗುತ್ತಿಗೆಯನ್ನು ಮುಂದಿನ 30 ವರ್ಷಗಳಿಗೆ ನವೀಕರಿಸುವ ಬಗ್ಗೆ ಹಾಗೂ ಗುತ್ತಿಗೆ ಹಣ ನಿಗಧಿಪಡಿಸುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ: 14-05-2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 07-06-2011 ನಿರ್ಣಯ.

***ನಿರ್ಣಯ :-*** ***ದಿನಾಂಕ 14-05-2011ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 07-06-2011ರ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ಗುತ್ತಿಗೆ ಮೊತ್ತ ರೂ.500/- (ಐದು ನೂರು ರೂಪಾಯಿ) ಗಳಿಗೆ ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.***

## *15]. ವಿಷಯದ ಸಂಖ್ಯೆ :-ತೆಲಆಸ್ಥಾಸ/122/2011-12*

ಆಯುಕ್ತರ ಟಿಪ್ಪಣಿ ದಿನಾಂಕ : 28-06-2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಶಾಸಕರು ಮತ್ತು ಪಾಲಿಕೆಯ ವಿವಿಧ ವಾರ್ಡ್‌ಗಳ ಸದಸ್ಯರುಗಳು ಪತ್ರವನ್ನು ನೀಡಿ ತಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು 2011-12ನೇ ಸಾಲಿನಲ್ಲಿ ಅನುದಾನವನ್ನು ಒದಗಿಸುವಂತೆ ಕೋರಿರುತ್ತಾರೆ. ಪತ್ರಗಳ ಪ್ರತಿಯನ್ನು ಕಡತದಲ್ಲಿ ಲಗತ್ತಿಸಿದೆ.

ಶಾಸಕರು ಮತ್ತು ಪಾಲಿಕೆಯ ಸದಸ್ಯರು ಕೋರಿರುವ ಕಾಮಗಾರಿಗಳ ವಿವರ ಮತ್ತು ಅನುದಾನದ ಮೊತ್ತದ ವಿವರಗಳನ್ನು ಅನುಬಂಧ-1 ರಲ್ಲಿ ನೀಡಿ ಕಡತದಲ್ಲಿ ಲಗತ್ತಿಸಿದೆ. ಒಟ್ಟಾರೆ ಮೊತ್ತ ರೂ.8829.69 ಲಕ್ಷಗಳಾಗುತ್ತದೆ.

2011-12ನೇ ಸಾಲಿನ ಆಯವ್ಯಯ ತಯಾರಿಕೆಯ ಪ್ರಕ್ರಿಯೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಸದರಿ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅನುದಾನದ ಮೊತ್ತ ರೂ.87829.69 ಲಕ್ಷಗಳನ್ನು 2011-12ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಕಲ್ಪಿಸುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :-*** ***ದಿನಾಂಕ 28-06-2011ರ ಆಯುಕ್ತರ ಟಿಪ್ಪಣಿಯನ್ನು ಪರಿಶೀಲಿಸಲಾಯಿತು, 2011-12ನೇ ಸಾಲಿನ ಆಯವ್ಯಯದಲ್ಲಿ, ಆಯುಕ್ತರ ಟಿಪ್ಪಣಿಯಲ್ಲಿ ಕೋರಿರುವ ಅನುದಾನವನ್ನು ಕಲ್ಪಿಸಬೇಕಾದ್ದಲ್ಲಿ ಪಾಲಿಕೆಯ ವಿವಿಧ ಸಂಪನ್ಮೂಲಗಳಿಂದ ಬರುತ್ತಿರುವ ಆದಾಯವೆಷ್ಟು ಮತ್ತು ಬರುವ ಆದಾಯದಲ್ಲಿ ಟಿಪ್ಪಣಿಯಲ್ಲಿ ಕೋರಿರುವ ಅನುದಾನವನ್ನು ಒದಗಿಸಲು ಸಾಧ್ಯವೇ? ಎಂಬ ಬಗ್ಗೆ ಮುಖ್ಯ ಲೆಕ್ಕಾಧಿಕಾರಿಯವರು ಪುನರ್ ಪರಿಶೀಲಿಸಿ ಸ್ಪಷ್ಟ ಮಾಹಿತಿ ಒದಗಿಸಲು ಕಡತವನ್ನು ಹಿಂದಿರಿಗಿಸಲಾಗಿದೆ.***

## *16]. ವಿಷಯದ ಸಂಖ್ಯೆ :-ತೆಲಆಸ್ಥಾಸ/123/2011-12*

ಆಯುಕ್ತರ ಟಿಪ್ಪಣಿ ದಿನಾಂಕ : 28-06-2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ ರವರು ಕಡತದ ಕಂಡಿಕೆ 5 ರಲ್ಲಿ ನಮೂದಿಸಿದ ಒಟ್ಟು 43 ಕಾಮಗಾರಿಗಳಿಗೆ ರೂ.2338.00 ಲಕ್ಷಗಳಿಗೆ

ಕಾಮಗಾರಿ ಸಂಖ್ಯೆಗಾಗಿ ಪ್ರಸ್ಥಾವನೆಯನ್ನು ಜಂಟಿ ಆಯುಕ್ತರು, ಮಹದೇವಪುರರವರ ಮೂಲಕ ಸಲ್ಲಿಸಿರುತ್ತಾರೆ.

ಕಂಡಿಕೆ 14ರಲ್ಲಿ ಪ್ರಸ್ತಾವನೆಯನ್ನು ಆದೇಶಕ್ಕೆ ಸಲ್ಲಿಸಿದ್ದು, "ಅ" ರಲ್ಲಿ ಸದರಿ ಕಾಮಗಾರಿಗಳಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ಸೂಕ್ತ ಅನುದಾನವನ್ನು ಒದಗಿಸಿಕೊಂಡು ಕಾಮಗಾರಿಯನ್ನು ನಿರ್ವಹಿಸಲು ಮಾನ್ಯ ಆಯುಕ್ತರು ಅನುಮೋದಿಸಿರುತ್ತಾರೆ.

ಸದರಿ ಕಾಮಗಾರಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ 2011–12ನೇ ಸಾಲಿನ ಆಯವ್ಯಯದಲ್ಲಿ ವಿಶೇಷ ಅನುದಾನವಾಗಿ ರೂ.2318.00 ಲಕ್ಷಗಳನ್ನು ಮಹದೇವಪುರ ವಿಧಾನಸಬಾ ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗಳಿಗೆ ಮೀಸಲಿರಿಸಿ ಆಯವ್ಯಯ ಲೆಕ್ಕ ಶೀರ್ಷಿಕೆ 19– ಕಾಮಗಾರಿ ಯೋಜನಾ ಶಾಖೆ – ರಸ್ತೆಗೆ ಸಂಬಂದಪಟ್ಟ ಕೆಲಸಗಳು – ಪಿ.ಸಂಖ್ಯೆ 2327 ರಲ್ಲಿ ಅವಕಾಶ ಕಲ್ಪಿಸಬೇಕಾಗಿರುತ್ತದೆ.

2011–12ನೇ ಸಾಲಿನ ಆಯವ್ಯಯ ತಯಾರಿಕೆಯ ಪ್ರಕ್ರಿಯೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಸದರಿ ಅಭಿವೃದ್ದಿ ಕಾಮಗಾರಿಗಳಿಗೆ ಅನುದಾನದ ಮೊತ್ತ ರೂ.2318.00 ಲಕ್ಷಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಕಲ್ಪಿಸುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

***–ಮುಂದೂಡಿದೆ–***

## ***17]. ವಿಷಯದ ಸಂಖ್ಯೆ :–ತೆಆಸ್ಥಾಸ/124/2011–12***

ಆಯುಕ್ತರ ಟಿಪ್ಪಣಿ ದಿನಾಂಕ : 29–06–2011ರಲ್ಲಿ ವಿವರಿಸಿರುವಂತೆ, ದಿನಾಂಕ: 29–03–2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆ ನಂತರ ಅದೇ ದಿನ ಸಂಜೆ ನಡೆದ ಸಭೆಯಲ್ಲಿ ಚರ್ಚಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕುಡಿಯುವ ನೀರಿನ ಸಮಸ್ಯೆ ಇರುವ ಪ್ರದೇಶಗಳಿಗೆ ನೀರು ಸರಬರಾಜು ಮಾಡುವ ದೃಷ್ಟಿಯಿಂದ 62 ಸಂಖ್ಯೆಯ 6000 ಲೀಟರ್ ಸಾಮರ್ಥ್ಯದ ಸ್ಟೀಲ್ ವಾಟರ್ ಟ್ಯಾಂಕರ್ಸ್ ಜೊತೆಗೆ (Mounted) ಬಿ.ಎಸ್. – IV Standard Chassis ಅನ್ನು ಖರೀದಿಸಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ರೂ. 7.50 ಕೋಟಿಗಳನ್ನು ಠೇವಣಿ ಮಾಡಲು ಬಿಡುಗಡೆ ಮಾಡಲು ಅಧ್ಯಕ್ಷರು, ಬೆಂ.ನೀ ಮತ್ತು ಒಳಚರಂಡಿ ಮಂಡಳಿ ರವರು ಕೋರಿರುತ್ತಾರೆ. ಕೆ.ಟಿ.ಟಿ.ಪಿ ಕಾಯ್ದೆಯನ್ವಯ ಟೆಂಡರ್ ಪ್ರಕ್ರಿಯೆ ಪ್ರಾರಂಬಿಸ ಬೇಕಾಗಿರುವಿದರಿಂದ ಶೀಘ್ರ ಬಿಡುಗಡೆಗೆ ಕೋರಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ರೂ.7.50 ಕೋಟಿಗಳನ್ನು ಠೇವಣಿ ಮಾಡಲು ಅನುದಾನದ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

ನಿರ್ಣಯ :– ***ದಿನಾಂಕ 29–06–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.***

## ***18]. ವಿಷಯದ ಸಂಖ್ಯೆ :–ತೆಆಸ್ಥಾಸ/125/2011–12***

ಆಯುಕ್ತರ ಟಿಪ್ಪಣಿ ದಿನಾಂಕ : 28–06–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು, ಚಾಮರಾಜಪೇಟೆ ರವರು ಶ್ರೀ ಕೃಷ್ಣರಾಜೇಂದ್ರ ಮಾರುಕಟ್ಟೆ ವಾರ್ಡ್ ಸಂಖ್ಯೆ 139ಕ್ಕೆ

2010–11ನೇ ಸಾಲಿನ ಮಾರುಕಟ್ಟೆ ಕಾಮಗಾರಿಗಳ ಪಟ್ಟಿಯನ್ನು ಕಡತದಲ್ಲಿ ಲಗತ್ತಿಸಿದ್ದು, ಅದರಂತೆ, ಒಟ್ಟು 31 ಕಾಮಗಾರಿಗಳಿಗೆ ರೂ.320.00 ಲಕ್ಷಗಳಲ್ಲಿ ಕಾಮಗಾರಿಯನ್ನು ಕೈಗೊಳ್ಳುವಂತೆ, ಶ್ರೀ ಬಿ.ಜೆಡ್ ಜಮೀರ್ ಅಹ್ಮದ್ ಖಾನ್ ಶಾಸಕರು, ಚಾಮರಾಜಪೇಟೆ ಇವರು ಕೋರಿರುತ್ತಾರೆ.

ಶ್ರೀ ಜಿ.ಎ.ಅಶ್ವಥನಾರಾಯಣ, ವಾರ್ಡ್ 139ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರು ಇವರು ಸಹ ಪತ್ರವನ್ನು ನೀಡಿ ರೂ.320.00 ಲಕ್ಷಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಕೋರಿರುತ್ತಾರೆ.

ಸದರಿ ಮಾರುಕಟ್ಟೆಯಲ್ಲಿ ಕೊಳಚೆ ಪ್ರದೇಶಕ್ಕೆ ಕಾಂಕ್ರಿಟ್ ಅಳವಡಿಸುವುದು, ಚರಂಡಿ ದುರಸ್ತಿಗೊಳಿಸುವುದು ಹೊರಭಾಗದ ಚರಂಡಿಗಳು ಶಿಥಿಲಗೊಂಡಿದ್ದು ದುರಸ್ತಿಗೊಳಿಸುವುದು ಹಾಗೂ ಇತರೇ ಕಾಮಗಾರಿಗಳನ್ನು ಲಗತ್ತಿಸಿರುವ ಪಟ್ಟಿಯಂತೆ ಕೈಗೊಳ್ಳಬೇಕಾಗಿರುತ್ತದೆ.

ಸದರಿ ಕಾಮಗಾರಿಗಳಿಗೆ 2010–11ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಲಭ್ಯವಿರುವುದಿಲ್ಲ. 2011–12ನೇ ಸಾಲಿನ ಆಯವ್ಯಯದಲ್ಲಿ ವಿಶೇಷ ಅನುದಾನವಾಗಿ ರೂ.320.00 ಗಳನ್ನು ವಾಡ್ 139ರ ಎಸ್.ಕೆ.ಆರ್.ಮಾರುಕಟ್ಟೆ ಕಾಮಗಾರಿಗಳಿಗೆ ಮೀಸಲಿರಿಸಿ, ಆಯವ್ಯಯ ಲೆಕ್ಕ ಶೀರ್ಷಿಕೆ 17– ಸಾರ್ವಜನಿಕ ಕಾಮಗಾರಿಗಳು (ವಲಯವಾರು) – ವಾರ್ಡ್ ಮಟ್ಟದ ಕಾಮಗಾರಿಗಳು – ವಿಶೇಷ ಅಭಿವೃದ್ಧಿ ಕಾಮಗಾರಿಗಳು – ಪಿ.ಸಂಖ್ಯೆ 2254 ರಲ್ಲಿ ಅವಕಾಶ ಕಲ್ಪಿಸಬೇಕಾಗಿರುತ್ತದೆ.

2011–12ನೇ ಸಾಲಿನ ಆಯವ್ಯಯ ತಯಾರಿಕೆಯ ಪ್ರಕ್ರಿಯೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಸದರಿ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನದ ಮೊತ್ತ ರೂ.320.00ಲಕ್ಷಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಕಲ್ಪಿಸುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

***–ಮುಂದೂಡಿದೆ–***

## *19]. ವಿಷಯದ ಸಂಖ್ಯೆ :–ತೆಆಸ್ಥಾಸ/126/2011–12*

ಆಯುಕ್ತರ ಟಿಪ್ಪಣಿ ದಿನಾಂಕ 01.07.2011ರಲ್ಲಿ ವಿವರಿಸಿರುವಂತೆ ವಾರ್ಡ್ ಸಂಖ್ಯೆ 95, ಸುಭಾಷ್ ನಗರದ ವೃಷಭಾವತಿ ನಾಲೆ (ಎಡಗಡೆ) V100 Ch 2900 ರಿಂದ 3045ಮೀ. ನಾರಾಯಣ ರಾವ್ ಕಾಲೋನಿ ಬಳಿ ತಡೆಗೋಡೆ ನಿರ್ಮಿಸುವ ಕಾಮಗಾರಿಯ ಅಂದಾಜು ಪಟ್ಟಿಯನ್ನು ರೂ.138.00 ಲಕ್ಷಗಳಿಗೆ ಮಾನ್ಯ ಆಯುಕ್ತರವರ ಕಂಡಿಕೆ (25), ಕಮೀಷನರ್ ಆರ್ಡರ್ No.PSR(G)/4235/2010-11, Dt:11.10.2010 ರಲ್ಲಿ ಮಂಜೂರು ನೀಡಿದ್ದು, ಸದರಿ ಕಾಮಗಾರಿ ಸಂಕೇತ 095-11-N-J-N-D-FO-003 ಅನ್ನು ನೀಡಿರುತ್ತಾರೆ. ಮುಂದುವರೆದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರು ದಿನಾಂಕ 25.04.2011 ರಂದು ಮಾನ್ಯ ಆಯುಕ್ತರವರನ್ನು ಈ ಕೆಲಸವನ್ನು ಜರೂರಾಗಿ ತೆಗೆದುಕೊಳ್ಳಲು ಕೋರಿರುತ್ತಾರೆ. ಈ ಪತ್ರದ ಮೇಲೆ ಮಾನ್ಯ ಆಯುಕ್ತರು ಸದಸ್ಯರ ಪ್ರಸ್ತಾವನೆಗೆ ಒಪ್ಪಿಗೆ ನೀಡಿರುತ್ತಾರೆ. ಈ ಕಾಮಗಾರಿಯು ದೊಡ್ಡ ಮಳೆ ನೀರು ಚರಂಡಿಗೆ ಸಂಬಂಧಿಸಿದಂತಿದ್ದು, ಎರಡು ಇಕ್ಕೆಲೆಗಳಲ್ಲೂ ಆಸರೆ ಗೋಡೆಯು ಕಲ್ಲು ಕಟ್ಟಡದಿಂದ ಕೂಡಿರುತ್ತದೆ. ಸದರಿ ಕಟ್ಟಡ ತುಂಬಾ ಹಳೆಯದಾಗಿದ್ದು ಶಿಥಿಲವಾಗಿರುತ್ತದೆ. ಆದುದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಆರ್.ಸಿ.ಸಿ.ತಡೆಗೋಡೆಯನ್ನು ನಿರ್ಮಿಸಲು ಉದ್ದೇಶಿಸಲಾಗಿರುತ್ತದೆ.

ಸದರಿ ಕಾಮಗಾರಿಗೆ ಈಗಾಗಲೇ ತಾಂತ್ರಿಕ ಮಂಜೂರಾತಿ ಸಂಖ್ಯೆ CE/SWD/TS/16/2010-11, Dated 25.11.2010 ಹಾಗೂ ಆಡಳಿತಾತ್ಮಕ ಮಂಜೂರಾತಿ ಸಂಖ್ಯೆ CE/SWD/ADMN/16/2010-11, Dt. 25.11.2010 ಅನುಮೋದನೆ ದೊರೆತಿರುತ್ತದೆ. ಮುಂದುವರೆದಂತೆ ಸದರಿ ಕಾಮಗಾರಿಗೆ

ರೂ.138.00 ಲಕ್ಷಗಳಿಗೆ ಸೂಕ್ತ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :– ದಿನಾಂಕ 01–07–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.***

## *20]. ವಿಷಯದ ಸಂಖ್ಯೆ :–ತೆಆಸ್ಥಾಸ/127/2011–12*

ಆಯುಕ್ತರ ಟಿಪ್ಪಣಿ ದಿನಾಂಕ 01.07.2011ರಲ್ಲಿ ವಿವರಿಸಿರುವಂತೆ ವಾರ್ಡ್ ಸಂಖ್ಯೆ 95, ಸುಭಾಷ್ ನಗರದ ವೃಷಭಾವತಿ ನಾಲೆ (ಎಡಗಡೆ) v100 Ch 2550 ರಿಂದ 2800ಮೀ. ಶಾಸ್ತ್ರಿನಗರದ ಬಳಿ ತಡೆಗೋಡೆ ನಿರ್ಮಿಸುವ ಕಾಮಗಾರಿಯ ಅಂದಾಜು ಪಟ್ಟಿಯನ್ನು ರೂ.120.00 ಲಕ್ಷಗಳಿಗೆ ಮಾನ್ಯ ಆಯುಕ್ತರವರ ಕಂಡಿಕೆ (25), ಕಮೀಷನರ್ ಆರ್ಡರ್ No.PSR(G)/4235/2010-11, Dt:11.10.2010 ರಲ್ಲಿ ಮಂಜೂರು ನೀಡಿದ್ದು, ಸದರಿ ಕಾಮಗಾರಿ ಸಂಕೇತ 095-11-N-J-N-D-FO-001 ಅನ್ನು ನೀಡಿರುತ್ತಾರೆ. ಮುಂದುವರೆದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರು ದಿನಾಂಕ 25.04.2011 ರಂದು ಮಾನ್ಯ ಆಯುಕ್ತರವರನ್ನು ಈ ಕೆಲಸವನ್ನು ಜರೂರಾಗಿ ತೆಗೆದುಕೊಳ್ಳಲು ಕೋರಿರುತ್ತಾರೆ. ಈ ಪತ್ರದ ಮೇಲೆ ಮಾನ್ಯ ಆಯುಕ್ತರು ಸದಸ್ಯರ ಪ್ರಸ್ತಾವನೆಗೆ ಒಪ್ಪಿಗೆ ನೀಡಿರುತ್ತಾರೆ. ಈ ಕಾಮಗಾರಿಯು ದೊಡ್ಡ ಮಳೆ ನೀರು ಚರಂಡಿಗೆ ಸಂಬಂಧಿಸಿದಂತಿದ್ದು, ಎರಡು ಇಕ್ಕೆಲೆಗಳಲ್ಲೂ ಆಸರೆ ಗೋಡೆಯು ಕಲ್ಲು ಕಟ್ಟಡದಿಂದ ಕೂಡಿರುತ್ತದೆ. ಸದರಿ ಕಟ್ಟಡ ತುಂಬಾ ಹಳೆಯದಾಗಿದ್ದು ಶಿಥಿಲವಾಗಿರುತ್ತದೆ. ಆದುದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಆರ್.ಸಿ.ಸಿ.ತಡೆಗೋಡೆಯನ್ನು ನಿರ್ಮಿಸಲು ಉದ್ದೇಶಿಸಲಾಗಿರುತ್ತದೆ.

ಸದರಿ ಕಾಮಗಾರಿಗೆ ಈಗಾಗಲೇ ತಾಂತ್ರಿಕ ಮಂಜೂರಾತಿ ಸಂಖ್ಯೆ CE/SWD/TS/17/2010-11, Dated 25.11.2010 ಹಾಗೂ ಆಡಳಿತಾತ್ಮಕ ಮಂಜೂರಾತಿ ಸಂಖ್ಯೆ CE/SWD/ADMN/17/2010-11, Dt. 25.11.2010 ಅನುಮೋದನೆ ದೊರೆತಿರುತ್ತದೆ. ಮುಂದುವರೆದಂತೆ ಸದರಿ ಕಾಮಗಾರಿಗೆ ರೂ.120.00 ಲಕ್ಷಗಳಿಗೆ ಸೂಕ್ತ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :– ದಿನಾಂಕ 01–07–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.***

## *21]. ವಿಷಯದ ಸಂಖ್ಯೆ :–ತೆಆಸ್ಥಾಸ/127–ಎ/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 28–06–2011ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 160ರ ವ್ಯಾಪ್ತಿಯ ಬಿ.ಇ.ಎಂ.ಎಲ್ 4ನೇ ಹಂತದ ಬೋಟ್ ಕ್ಲಬ್ ಉದ್ಯಾನವನ ಅಭಿವೃದ್ಧಿಪಡಿಸುವ ಕಾಮಗಾರಿಯ ಅಂದಾಜು ಮೊತ್ತ ರೂ. 400.00 ಲಕ್ಷಗಳಿಗೆ ಕಲ್ಪಿಸಲು ಶ್ರೀ ಜಿ.ಹೆಚ್. ರಾಮಚಂದ್ರ, ಮಾನ್ಯ ಪಾಲಿಕೆ ಸದಸ್ಯರು ವಾರ್ಡ್ ಸಂಖ್ಯೆ 160 ರವರು ಪತ್ರದ ಮುಖಾಂತರ ಕೋರಿರುತ್ತಾರೆ.

ಸದರಿ ಕಾಮಗಾರಿ ಅಂದಾಜು ಮೊತ್ತ ರೂ. 400.00 ಲಕ್ಷಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಪರಿಗಣಿಸಿ ಸೂಕ್ತ ಅನುದಾನವನ್ನು ಅಳವಡಿಸಿಕೊಳ್ಳಲು ಹಾಗೂ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :– ದಿನಾಂಕ : 28–06–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಕಾಮಗಾರಿ ಅಂದಾಜು ಮೊತ್ತ ರೂ.400.00 ಲಕ್ಷಗಳಿಗೆ (ನಾಲ್ಕು ನೂರು ಲಕ್ಷಗಳಿಗೆ) ಬದಲಾಗಿ ರೂ.200.00 (ರೂ.ಇನ್ನೂರು ಲಕ್ಷಗಳು) ಮಾತ್ರ 2011–12ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲು ಸಮಿತಿಯು ತೀರ್ಮಾನಿಸಿತು.***

## *22]. ವಿಷಯದ ಸಂಖ್ಯೆ :–ತೆಆಸ್ಥಾಸ/128/2011–12*

ಆಯುಕ್ತರ ಟಿಪ್ಪಣಿ ದಿನಾಂಕ 01.07.2011ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 90ರಲ್ಲಿ ಹಲಸೂರು ಎಂ.ವಿ.ಗಾರ್ಡನ್‌ನಲ್ಲಿರುವ ಡೋಬಿಗಾಟ್‌ನ್ನು ಅಭಿವೃದ್ದಿಗೊಳಿಸುವ ಕಾಮಗಾರಿಯ ಅಂದಾಜು ಮೊತ್ತ ರೂ.155.00 ಲಕ್ಷಗಳಿಗೆ ಅನುಮೋದನೆ ನೀಡಲು ಪ್ರಸ್ಥಾವನೆ ಸಲ್ಲಿಸಲಾಗಿದೆ.

ಸದರಿ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸುವ ಅವಶ್ಯವಿದ್ದು, ಆದ್ದರಿಂದ 2011–12ನೇ ಸಾಲಿನ ಆಯವ್ಯಯಕ್ಕೆ ಅನುಮೋದನೆ ನಿರೀಕ್ಷಿಸಿ, ಸದರಿ ಕಾಮಗಾರಿಯ ಮೊತ್ತ ರೂ.155.00 ಲಕ್ಷಗಳನ್ನು 2011–12ನೇ ಸಾಲಿನ ಆಯವ್ಯಯದ ಅಗಸರಕಟ್ಟೆ ಅಭಿವೃದ್ಧಿ ಪಿ1806 ಲೆಕ್ಕಶೀರ್ಷಿಕೆಯಡಿ ಪರಿಗಣಿಸಿ ಹಾಗೂ ಸೂಕ್ತ ಅನುದಾನವನ್ನು ಅಳವಡಿಸಿಕೊಳ್ಳಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ :– *ದಿನಾಂಕ 01–07–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.***

## *23]. ವಿಷಯದ ಸಂಖ್ಯೆ :–ತೆಆಸ್ಥಾಸ/129/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 01–07–2011ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 43ರಲ್ಲಿ ನಂದಿನಿ ಬಡಾವಣೆ ವ್ಯಾಪ್ತಿಯಲ್ಲಿ ಪ್ರತಿಷ್ಠಿತ ಪದ್ಮಭೂಷಣ ಡಾ|| ರಾಜ್‌ಕುಮಾರ್‌ರವರ ಸಮಾಧಿ ಮುಂಭಾಗ ಪಾದಚಾರಿ ರಸ್ತೆ ಶಿಥಿಲವಾಗಿದ್ದು, ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು ತುರ್ತಾಗಿ ದುರಸ್ಥಿಗೊಳಿಸುವ ಕಾಮಗಾರಿಯ ಅಂದಾಜು ಮೊತ್ತ ರೂ. 99.75 ಲಕ್ಷಗಳಿಗೆ 2011–12 ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಕಲ್ಪಿಸಲು ಶ್ರೀ ಎಂ ನಾಗರಾಜ್, ಮಾನ್ಯ ಪಾಲಿಕೆ ಸದಸ್ಯರು ವಾರ್ಡ್ ಸಂಖ್ಯೆ 43 ರವರು ಪತ್ರದ ಮುಖಾಂತರ ಕೋರಿರುತ್ತಾರೆ.

ಸದರಿ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸುವ ಅವಶ್ಯವಿದ್ದು, ಅಂದಾಜು ಮೊತ್ತ ರೂ. 99.75 ಲಕ್ಷಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಪರಿಗಣಿಸಿ ಸೂಕ್ತ ಅನುದಾನವನ್ನು ಅಳವಡಿಸಿಕೊಳ್ಳಲು ಹಾಗೂ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ :– 2011–12ನೇ ಸಾಲಿನ ಆಯವ್ಯಯದಲ್ಲಿ ವಾರ್ಡ್‌ಗಳಿಗೆ ಒದಗಿಸುವ ಅನುದಾನದಲ್ಲಿ ಬಳಸಿಕೊಳ್ಳುವ ಷರತ್ತಿಗೆ ಒಳಪಡಿಸಿ ಆಯುಕ್ತರ ದಿನಾಂಕ : 01–07–2011ರ ಟಿಪ್ಪಣಿಯನ್ನು ಒಪ್ಪಿದೆ.**

## *24]. ವಿಷಯದ ಸಂಖ್ಯೆ :–ತೆಆಸ್ಥಾಸ/130/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 01–07–2011ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 43ರಲ್ಲಿ ನಂದಿನಿ ಬಡಾವಣೆಯಲ್ಲಿ ರಾಮಕೃಷ್ಣನಗರದಲ್ಲಿ ವಾಣಿಜ್ಯ ಕಟ್ಟಡ ಸಂಕೀರ್ಣ ನಿರ್ಮಾಣದ ಕಾಮಗಾರಿಗೆ 2010–11 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ2254ರ ಅಡಿಯಲ್ಲಿ ವಾರ್ಡ್ ಸಂಖ್ಯೆ 43ಕ್ಕೆ ಮೀಸಲಿಟ್ಟ ವಿಶೇಷ ಅನುದಾನದ ರೂ. 300.00 ಲಕ್ಷಗಳಲ್ಲಿ ಮೇಲ್ಕಂಡ ಕಾಮಗಾರಿಗೆ ರೂ. 100.00 ಲಕ್ಷಗಳಿಗೆ 043–11–000072 ಜಾಬ್ ಸಂಖ್ಯೆ ನೀಡಲಾಗಿದೆ.

ಮೇಲ್ಕಂಡ ಕಾಮಗಾರಿಗೆ ರೂ. 500.00 ಲಕ್ಷಗಳಿಗೆ ಅಂದಾಜು ತಯಾರಿಸಲಾಗಿದ್ದು, ಉಳಿಕೆ ಮೊತ್ತ ರೂ. 400.00 ಲಕ್ಷಗಳಿಗೆ ಅನುಮೋದನೆ ನೀಡಲು ಪ್ರಸ್ಥಾವನೆ ಸಲ್ಲಿಸಲಾಗಿದೆ.

ಉಳಿಕೆ ಮೊತ್ತ ರೂ. 400.00 ಲಕ್ಷಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ವಾರ್ಡ್ ಸಂಖ್ಯೆ 43ರ ವಿಶೇಷ ಅಭಿವೃದ್ಧಿ ಕಾಮಗಾರಿಗಳು ಪಿ2254 ಲೆಕ್ಕಶೀರ್ಷಿಕೆಯಡಿ ಪರಿಗಣಿಸಿ ಹಾಗೂ ಸೂಕ್ತ ಅನುದಾನವನ್ನು ಅಳವಡಿಸಿಕೊಳ್ಳಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

ನಿರ್ಣಯ :– ದಿನಾಂಕ 01–07–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ವಾರ್ಡ್‌ಗಳಿಗೆ ಒದಗಿಸುವ ಅನುದಾನದಲ್ಲಿ ರೂ.100–00 (ಒಂದು ನೂರು) ಲಕ್ಷಗಳ ಅನುದಾನವನ್ನು ಒದಗಿಸಲು ಸಮಿತಿಯು ತೀರ್ಮಾನಿಸಿತು.

## 25]. ವಿಷಯದ ಸಂಖ್ಯೆ :–ತೆಆಸ್ಥಾಸ/131/2011–12

ಆಯುಕ್ತರ ಟಿಪ್ಪಣಿ ದಿನಾಂಕ 01.07.2011ರಲ್ಲಿ ವಿವರಿಸಿರುವಂತೆ ವಾರ್ಡ್ ಸಂಖ್ಯೆ 93ರಲ್ಲಿ ವಸಂತನಗರ ಡೋಬಿಗಾಟ್‌ನ್ನು ಅಭಿವೃದ್ಧಿಗೋಳಿಸುವ ಕಾಮಗಾರಿಯ ಅಂದಾಜು ಮೊತ್ತ ರೂ.94.00 ಲಕ್ಷಗಳಿಗೆ ಅನುಮೋದನೆ ನೀಡಲು ಪ್ರಸ್ಥಾವನೆ ಸಲ್ಲಿಸಲಾಗಿದೆ.

ಸದರಿ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸುವ ಅವಶ್ಯವಿದ್ದು, ಆದ್ದರಿಂದ 2011–12ನೇ ಸಾಲಿನ ಆಯವ್ಯಯಕ್ಕೆ ಅನುಮೋದನೆ ನಿರೀಕ್ಷಿಸಿ, ಸದರಿ ಕಾಮಗಾರಿಯ ಮೊತ್ತ ರೂ.94.00 ಲಕ್ಷಗಳನ್ನು 2011–12ನೇ ಸಾಲಿನ ಆಯವ್ಯಯದ ಅಗಸರಕಟ್ಟೆ ಅಭಿವೃದ್ಧಿ ಪಿ1806 ಲೆಕ್ಕಶೀರ್ಷಿಕೆಯಡಿ ಪರಿಗಣಿಸಿ ಹಾಗೂ ಸೂಕ್ತ ಅನುದಾನವನ್ನು ಅಳವಡಿಸಿಕೊಳ್ಳಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

ನಿರ್ಣಯ :– *ದಿನಾಂಕ 01–07–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.*

## 26]. ವಿಷಯದ ಸಂಖ್ಯೆ :–ತೆಆಸ್ಥಾಸ/132/2011–12

ಆಯುಕ್ತರ ಟಿಪ್ಪಣಿ ದಿನಾಂಕ : 04–07–2011ರಲ್ಲಿ ವಿವರಿಸಿರುವಂತೆ, ದಿನಾಂಕ:08.01.2011 ರಂದು ಗಾಂಧಿನಗರ ವಿಧಾನ ಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ 95ರ ಪರಿವೀಕ್ಷಣಾ ವೇಳೆಯಲ್ಲಿ, ವಾಟಾಳ್ ನಾಗರಾಜ್ ರಸ್ತೆಗೆ ಪರ್ಯಾಯವಾಗಿ ಶ್ರೀರಾಮಪುರ 5ನೇ ಮುಖ್ಯರಸ್ತೆಯಿಂದ ಪ್ಲಾಟ್‌ಫಾರಂ ರಸ್ತೆಗೆ ಸಂಪರ್ಕಿಸುವ ಅರ್ರ್ಯಾಕ್ ಶಾಪ್ ರಸ್ತೆಯನ್ನು ಅಗಲೀಕರಣಗೊಳಿಸುವ ಅವಶ್ಯಕತೆಯನ್ನು ಮನಗಂಡು ಹಾಗೂ ಸದರಿ ರಸ್ತೆಯಲ್ಲಿ ಹೆಚ್ಚಾಗಿ ವಾಸದ ಮನೆಗಳಿಲ್ಲದಿರುವುದರಿಂದ ಹಾಗೂ ವಿವಿಧ ಇಲಾಖೆಗಳಿಗೆ ಸೇರಿದ ಸರ್ಕಾರಿ ಜಾಗದ ಲಭ್ಯತೆ ಇರುವುದರಿಂದ ಕೂಡಲೇ ಟಿ.ಡಿ.ಆರ್ ನಿಯಮಾವಳಿಯಲ್ಲಿ ಭೂಸ್ವಾಧೀನಪಡಿಸಿಕೊಂಡು ಅಗಲೀಕರಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸಂಬಂಧಿಸಿದ ಅಭಿಯಂತರರಿಗೆ ಸೂಚಿಸಲಾಗಿ, ಸದರಿಯವರು ಅಗತ್ಯ ಅಂಶಗಳನ್ನೊಳಗೊಂಡಂತೆ ಅರ್ರ್ಯಾಕ್ ಶಾಪ್ ರಸ್ತೆಯ ಅಗಲೀಕರಣ ಕಾಮಗಾರಿಗೆ ರೂ.421.00 ಲಕ್ಷಗಳ ಅಂದಾಜನ್ನು ತಯಾರಿಸಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಮುಂದುವರೆದಂತೆ, ಸದರಿ ಕಾಮಗಾರಿಯನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದ್ದು, ಈ ಸಂಬಂಧ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

ನಿರ್ಣಯ :– *ದಿನಾಂಕ 04–07–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.*

## *27]. ವಿಷಯದ ಸಂಖ್ಯೆ :–ತೆಆಸ್ಥಾಸ/133/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 04–07–2011ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 43ರಲ್ಲಿ ನಂದಿನಿ ಬಡಾವಣೆಯಲ್ಲಿ ಆಟದ ಮೈದಾನ ನಿರ್ಮಿಸುವ ಕಾಮಗಾರಿಗೆ 2010–11 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ2254ರ ಅಡಿಯಲ್ಲಿ ವಾರ್ಡ್ ಸಂಖ್ಯೆ 43ಕ್ಕೆ ಮೀಸಲಿಟ್ಟ ವಿಶೇಷ ಅನುದಾನದ ರೂ. 300.00 ಲಕ್ಷಗಳಲ್ಲಿ ಮೇಲ್ಕಂಡ ಕಾಮಗಾರಿಗೆ ರೂ. 100.00 ಲಕ್ಷಗಳಿಗೆ 043–11–000073 ಜಾಬ್ ಸಂಖ್ಯೆ ನೀಡಲಾಗಿದೆ.

ಮೇಲ್ಕಂಡ ಕಾಮಗಾರಿಗೆ ರೂ. 500.00 ಲಕ್ಷಗಳಿಗೆ ಅಂದಾಜು ತಯಾರಿಸಲಾಗಿದ್ದು, ಉಳಿಕೆ ಮೊತ್ತ ರೂ. 400.00 ಲಕ್ಷಗಳಿಗೆ ಅನುಮೋದನೆ ನೀಡಲು ಪ್ರಸ್ಥಾವನೆ ಸಲ್ಲಿಸಲಾಗಿದೆ.

ಉಳಿಕೆ ಮೊತ್ತ ರೂ. 400.00 ಲಕ್ಷಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ವಾರ್ಡ್ ಸಂಖ್ಯೆ 43ರ ವಿಶೇಷ ಅಭಿವೃದ್ಧಿ ಕಾಮಗಾರಿಗಳು ಪಿ2254 ಲೆಕ್ಕಶೀರ್ಷಿಕೆಯಡಿ ಪರಿಗಣಿಸಿ ಹಾಗೂ ಸೂಕ್ತ ಅನುದಾನವನ್ನು ಅಳವಡಿಸಿಕೊಳ್ಳಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ :–** **ದಿನಾಂಕ 04–07–2011ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ವಾರ್ಡ್‌ಗಳಿಗೆ ಒದಗಿಸುವ ಅನುದಾನದಲ್ಲಿ ರೂ.100–00 (ಒಂದು ನೂರು) ಲಕ್ಷಗಳ ಅನುದಾನವನ್ನು ಒದಗಿಸಲು ಸಮಿತಿಯು ತೀರ್ಮಾನಿಸಿತು.**

## *28]. ವಿಷಯದ ಸಂಖ್ಯೆ :–ತೆಆಸ್ಥಾಸ/134/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 04–07–2011ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 43ರಲ್ಲಿ ನಂದಿನಿ ಬಡಾವಣೆಯಲ್ಲಿ ನಂದಿನಿ ಬಡಾವಣೆಯಲ್ಲಿ ಸಾಂಸ್ಕೃತಿಕ ಭವನ ನಿರ್ಮಾಣದ ಕಾಮಗಾರಿಗೆ 2010–11 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ2254ರ ಅಡಿಯಲ್ಲಿ ವಾರ್ಡ್ ಸಂಖ್ಯೆ 43ಕ್ಕೆ ಮೀಸಲಿಟ್ಟ ವಿಶೇಷ ಅನುದಾನದ ರೂ. 300.00 ಲಕ್ಷಗಳಲ್ಲಿ ಮೇಲ್ಕಂಡ ಕಾಮಗಾರಿಗೆ ರೂ. 100.00 ಲಕ್ಷಗಳಿಗೆ 043–11–000071 ಜಾಬ್ ಸಂಖ್ಯೆ ನೀಡಲಾಗಿದೆ.

ಮೇಲ್ಕಂಡ ಕಾಮಗಾರಿಗೆ ರೂ. 500.00 ಲಕ್ಷಗಳಿಗೆ ಅಂದಾಜು ತಯಾರಿಸಲಾಗಿದ್ದು, ಉಳಿಕೆ ಮೊತ್ತ ರೂ. 400.00 ಲಕ್ಷಗಳಿಗೆ ಅನುಮೋದನೆ ನೀಡಲು ಪ್ರಸ್ಥಾವನೆ ಸಲ್ಲಿಸಲಾಗಿದೆ.

ಉಳಿಕೆ ಮೊತ್ತ ರೂ. 400.00 ಲಕ್ಷಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ವಾರ್ಡ್ ಸಂಖ್ಯೆ 43ರ ವಿಶೇಷ ಅಭಿವೃದ್ಧಿ ಕಾಮಗಾರಿಗಳು ಪಿ2254 ಲೆಕ್ಕಶೀರ್ಷಿಕೆಯಡಿ ಪರಿಗಣಿಸಿ ಹಾಗೂ ಸೂಕ್ತ ಅನುದಾನವನ್ನು ಅಳವಡಿಸಿಕೊಳ್ಳಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ :–** **ದಿನಾಂಕ 04–07–2011ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಗಳಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ವಾರ್ಡ್‌ಗಳಿಗೆ ಒದಗಿಸಲಿರುವ ಅನುದಾನದಲ್ಲಿ ರೂ.100–00 (ಒಂದು ನೂರು) ಲಕ್ಷಗಳ ಅನುದಾನವನ್ನು ಒದಗಿಸಲು ಸಮಿತಿಯು ತೀರ್ಮಾನಿಸಿತು.**

## *29]. ವಿಷಯದ ಸಂಖ್ಯೆ :–ತೆಆಸ್ಥಾಸ/135/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ:ಪಿಆರ್‌ಓ/ಸಿ1/ಪಿಆರ್/49/2011–12 ದಿನಾಂಕ :04–07–2011ರಲ್ಲಿ ವಿವರಿಸಿರುವಂತೆ, ಶ್ರೀ ಮಹದೇವಪ್ರಕಾಶ್, ಸಂಪಾದಕ/ಪ್ರಕಾಶಕರು, ಈ ಭಾನುವಾರ ಪತ್ರಿಕೆ, ನಂ. 3390/39, ಮೊದಲ ಮಹಡಿ, 3ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆ, ಹಂಪಿನಗರ, ಬೆಂಗಳೂರು–40 ರವರು ಮಾನ್ಯ ಆಯುಕ್ತರಿಗೆ ದಿನಾಂಕ: 25.05.2011ರಂದು ಮನವಿ ಪತ್ರ ಸಲ್ಲಿಸಿ, ತಮ್ಮ ಪತ್ರಿಕೆ ವತಿಯಿಂದ 7ನೇ ವಾರ್ಷಿಕೋತ್ಸವದ ಅಂಗವಾಗಿ ವಿಶೇಷಾಂಕವನ್ನು ಹೊರತರುತ್ತಿದ್ದು, ಈ ವಿಶೇಷ ಸಂಚಿಕೆಗೆ

1,00,000/- ಮೊತ್ತದ (ಕೊನೆಯ ವರ್ಣ ರಕ್ಷಾಪುಟ) ಜಾಹೀರಾತನ್ನು ನೀಡುವಂತೆ ಕೋರಿರುತ್ತಾರೆ.

ಈ ಭಾನುವಾರ ವಾರ ಪತ್ರಿಕೆಯುವರು ಹೊರತರುತ್ತಿರುವ ವಿಶೇಷ ಸಂಚಿಕೆಗೆ ರೂ. 1,00,000/- ಗಳಿಗೆ ಪಾಲಿಕೆ ವತಿಯಿಂದ ಜಾಹೀರಾತು ಬಿಡುಗಡೆ ಮಾಡಲು ಲೆಕ್ಕಶೀರ್ಷಿಕೆ-04, ಸಾರ್ವಜನಿಕ ಸಂಪರ್ಕ ವಿಭಾಗ, ಜಾಹೀರಾತು ಮತ್ತು ಪ್ರಚಾರ ವೆಚ್ಚಗಳು ಶೀರ್ಷಿಕೆಯಿಂದ ಮಂಜೂರು ಮಾಡಲು ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***-ಮುಂದೂಡಿದೆ-***

## *30]. ವಿಷಯದ ಸಂಖ್ಯೆ :-ತೆಆಸ್ಥಾಸ/136/2011-12*

ಆಯುಕ್ತರ ಟಿಪ್ಪಣಿ ದಿನಾಂಕ 04.07.2011ರಲ್ಲಿ ವಿವರಿಸಿರುವಂತೆ Construction of RCC retaining wall in V-100 Ch:3100 to 3200 mtrs of V Valley backside of Ganesh Temple, Okalipuram Ward-95 ಕಾಮಗಾರಿಯ ಅಂದಾಜು ಪಟ್ಟಿಯನ್ನು ರೂ.96.00 ಲಕ್ಷಗಳಿಗೆ ಮಾನ್ಯ ಆಯುಕ್ತರವರ ಕಂಡಿಕೆ (21), ಕಮಿಷನರ್ ಆರ್ಡರ್ ನಂ. No.PSR(G)/4232/2010-11, Dt:11.10.2010 ರಲ್ಲಿ ಮಂಜೂರು ನೀಡಿದ್ದು, ಸದರಿ ಕಾಮಗಾರಿ ಸಂಕೇತ 095-11-N-J-N-D-FO-002 ಅನ್ನು ನೀಡಿರುತ್ತಾರೆ. ಹಾಗೂ ಈ ಕಾಮಗಾರಿಯನ್ನು ಟೆಂಡರ್ ಮುಖಾಂತರ ಗುತ್ತಿಗೆದಾರರಾದ ಶ್ರೀ ಡಿ.ಜಿ.ಜಗದೀಶ್‌ರವರು ಅಂದಾಜು ಪಟ್ಟಿಗಿಂತ ಶೇ.9.60% ರಷ್ಟು ಹೆಚ್ಚು ನಮೂದಿಸಿದ್ದು, ಉಳಿದವರಿಗಿಂತ ಕಡಿಮೆ ಬಿಡ್‌ದಾರರಾಗಿರುತ್ತಾರೆ. ಈ ಕಾಮಗಾರಿಯು ದೊಡ್ಡ ಮಳೆ ನೀರು ಚರಂಡಿಗೆ ಸಂಬಂಧಿಸಿದಂತಿದ್ದು, ಎರಡು ಇಕ್ಕೆಲೆಗಳಲ್ಲೂ ಆಸರೆ ಗೋಡೆಯು ಕಲ್ಲು ಕಟ್ಟಡದಿಂದ ಕೂಡಿರುತ್ತದೆ. ಸದರಿ ಕಟ್ಟಡ ತುಂಬಾ ಹಳೆಯದಾಗಿದ್ದು ಶಿಥಿಲವಾಗಿರುತ್ತದೆ. ಆದುದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಆರ್.ಸಿ.ಸಿ.ತಡೆಗೋಡೆಯನ್ನು ನಿರ್ಮಿಸಲು ಉದ್ದೇಶಿಸಲಾಗಿರುತ್ತದೆ.

ಸದರಿ ಕಾಮಗಾರಿಗೆ ಈಗಾಗಲೇ ತಾಂತ್ರಿಕ ಮಂಜೂರಾತಿ ಸಂಖ್ಯೆ CE/SWD/TS/14/2010-11, Dated 25.11.2010 ಹಾಗೂ ಆಡಳಿತಾತ್ಮಕ ಮಂಜೂರಾತಿ ಸಂಖ್ಯೆ CE/SWD/ADMN/14/2010-11, Dt. 25.11.2010 ಅನುಮೋದನೆ ದೊರೆತಿರುತ್ತದೆ. ಮುಂದುವರೆದಂತೆ ಸದರಿ ಕಾಮಗಾರಿಗೆ ರೂ.96.00 ಲಕ್ಷಗಳಿಗೆ ಸೂಕ್ತ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :- ದಿನಾಂಕ 04-07-2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.***

## *31]. ವಿಷಯದ ಸಂಖ್ಯೆ :-ತೆಆಸ್ಥಾಸ/137/2011-12*

ಆಯುಕ್ತರ ಟಿಪ್ಪಣಿ ದಿನಾಂಕ 07.06.2011ರಲ್ಲಿ ವಿವರಿಸಿರುವಂತೆ, ಶ್ರೀ ಎಸ್.ಕೆ.ನಟರಾಜ, ಮಾಜಿ ಮಹಾಪೌರರು ತಮ್ಮ ಪತ್ರ ದಿನಾಂಕ 18.03.2011ರ ಪತ್ರದಲ್ಲಿ ವಾರ್ಡ್ ಸಂಖ್ಯೆ 180 ಮತ್ತು 165ರ ಕಾಮಗಾರಿಗಳಿಗೆ ಅನುದಾನ ಒದಗಿಸಿ, ಜಾಬ್ ನಂಬರ್ ನೀಡಲು ಕೋರಿದ್ದು, 2010-11ನೇ ಸಾಲಿನ ಅಯವ್ಯಯದ ಪೂಜ್ಯ ಮಹಾಪೌರರ ಅನುದಾನದಲ್ಲಿ ಅನುದಾನ ಲಭ್ಯವಿರುವುದಿಲ್ಲ.

ವಾರ್ಡ್ ಸಂಖ್ಯೆ 180 ಬನಶಂಕರಿ ರಸ್ತೆಗಳು ಹಾಗೂ ಮೋರಿಗಳು ತುಂಬಾ ಹದಗೆಟ್ಟಿದ್ದು, ನೀರು ಸರಾಗವಾಗಿ ಮೋರಿಯಲ್ಲಿ ಹರೆಯದೇ ರಸ್ತೆಗಳ ಮೇಲೆ ಹರಿಯುತ್ತಿದ್ದು, ಸಾರ್ವಜನಿಕರಿಗೆ ತುಂಬಾ ತೊಂದರೆ ಉಂಟಾಗಿರುವುದರಿಂದ ಸದರಿ ಕಾಮಗಾರಿಗಳನ್ನು ತುರ್ತಾಗಿ ಅನುಮೋದನೆ ನಿಡಲು ಪ್ರಧಾನ ಅಭಿಯಂತರರು ಕೋರಿರುತ್ತಾರೆ.

ಪ್ರಸ್ತುತ ಮಳೆಗಾಲ ಅಧಿಕವಾಗಿರುವುದರಿಂದ ಸದರಿ ಕಾಮಗಾರಿಗಳನ್ನು ತುರ್ತಾಗಿ ನಿರ್ವಹಿಸುವ ಅವಶ್ಯವಿರುತ್ತದೆ. ಆದ್ದರಿಂದ ವಾರ್ಡ್180ರ 11 ಕಾಮಗಾರಿಗಳ ಅಂದಾಜು ಮೊತ್ತ ರೂ.210.00 ಲಕ್ಷಗಳು ಮತ್ತು 165ರ 2 ಕಾಮಗಾರಿಗಳ ಅಂದಾಜು ಮೊತ್ತ ರೂ.40.00 ಲಕ್ಷಗಳಿಗೆ ಒಟ್ಟಾರೆ ರೂ.250.00 ಲಕ್ಷಗಳಿಗೆ 2011-12ನೇ ಸಾಲಿನ ಆಯವ್ಯಯದಲ್ಲಿ ಸೂಕ್ತ ಅನುದಾನ ಒದಗಿಸಿಕೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :-*** ***ದಿನಾಂಕ 07-06-2011ರ ಟಿಪ್ಪಣಿಯನ್ನು ಒಪ್ಪುತ್ತಾ ಸದರಿ ಕಾಮಗಾರಿಗಳಿಗೆ 2011-12ನೇ ಸಾಲಿನ ಆಯವ್ಯಯದಲ್ಲಿ ಒದಗಿಸುವ ಅನುದಾನದಲ್ಲಿ ಬಳಸಿಕೊಳ್ಳುವ ಷರತ್ತಿಗೆ ಒಳಪಡಿಸಿ ನಿಯಮಾನುಸಾರ ತುರ್ತಾಗಿ ಅನುಷ್ಠಾನಗೊಳಿಸುವ ಬಗ್ಗೆ ಕ್ರಮಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.***

**ಹೆಚ್ಚುವರಿ ವಿಷಯಗಳು :-**

***01]. ವಿಷಯದ ಸಂಖ್ಯೆ :-ತೆಆಸ್ಥಾಸ/138/2011-12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)/ಪಿಆರ್/51/02-03, ದಿನಾಂಕ : 23-06-2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:77, ರಾಜರಾಂ ರಸ್ತೆಯಲ್ಲಿರುವ ಪಾಲಿಕೆಯ ಸ್ವತ್ತಿನ ಸಂಖ್ಯೆ:22/1, ಸ್ವತ್ತಿನ ಅಳತೆ 95X65.5+106 (8146.25) ಚದರ ಅಡಿ ಅಳತೆ ಜಾಗವನ್ನು ವಿದ್ಯಾರ್ಥಿನಿಲಯದ ಸಲುವಾಗಿ ವಾರ್ಷಿಕ ರೂ.12% ರಂತೆ ತೊಗಟವೀರ ಕ್ಷತ್ರಿಯ ಸಂಘಕ್ಕೆ 40 ವರ್ಷಗಳ ಅವಧಿಗೆ ದಿ:19-02-1959 ರಿಂದ 18-02-1999ರ ವರೆಗೆ ಗುತ್ತಿಗೆ ನೀಡಲಾಗಿದ್ದು, ಗುತ್ತಿಗೆ ಅವಧಿಯು ದಿನಾಂಕ:18-02-1999ಕ್ಕೆ ಮುಕ್ತಾಯವಾಗಿರುತ್ತದೆ.

ತೊಗಟವೀರ ಕ್ಷತ್ರಿಯ ಸಂಘದ ಕಾರ್ಯದರ್ಶಿಗಳು ಈ ಕಛೇರಿಗೆ ಮನವಿ ನೀಡಿ ಸಮುದಾಯದ ಹಿನ್ನೆಲೆ ಕಾರ್ಯಚಟುವಟಿಕೆಗಳು ಸದರಿ ಸಮುದಾಯದ ಜೀವನ ಮಟ್ಟ ಸುಧಾರಿಸಲು ಶ್ರೀ.ಚೌಡೇಶ್ವರಿ ಕೋ ಅಪರೇಟೀವ್ ಸೊಸೈಟಿ ಸ್ಥಾಪಿಸಿ ಬಡತನ ರೇಖೆಗಿಂತ ಕೆಳವರ್ಗದ ಸದಸ್ಯರಿಗೆ ರೂ.20,000/- ಗಳಿಂದ ರೂ.30,000/-ಗಳವರೆಗೆ ನೆರವು ನೀಡಲಾಗುತ್ತಿದೆ ಎಂದು ನೇಕಾರ ಜನಾಂಗದ ಬಡ ವಿದ್ಯಾರ್ಥಿಗಳಿಗೆ ಪ್ರತಿ ಸಾಲಿನಲ್ಲಿ 50 ರಿಂದ 60 ಮಂದಿಗೆ ಉಚಿತವಾಗಿ ಪ್ರವೇಶ ನೀಡುವುದರ ಜೊತೆಗೆ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಂದ ಯಾವುದೇ ಶುಲ್ಕ ಪಡೆಯದೆ ಸಂಘದ ವತಿಯಿಂದ ಊಟ ವಸತಿಯನ್ನು ಉಚಿತವಾಗಿ ನೀಡಲಾಗುತ್ತಿದ್ದು, ಎರಡು ವಿದ್ಯಾರ್ಥಿ ನಿಲಯಗಳಿಂದ ಮಾಸಿಕ ರೂ.40,000/- ವೆಚ್ಚವಾಗುವುದೆಂದು ವೆಚ್ಚದ ಮೂಲವನ್ನು ತಿಳಿಸಿ ಸರ್ವತೋಮುಖ ಅಭಿವೃದ್ಧಿಗೆ ಸಹಾಯಕವಾಗಲು ಮಾರುಕಟ್ಟೆ ದರದ ಕನಿಷ್ಠ ಬೆಲೆಗೆ ಗುತ್ತಿಗೆಗೆ ನೀಡುವಂತೆ ಕೋರಿರುತ್ತಾರೆ.

ಈ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ನಿರ್ಣಯ ಹಾಗೂ ಬೆಂಗಳೂರು ಮಹಾನಗರ ಪಾಲಿಕೆಯ ಆಡಳಿತಾಧಿಕಾರಿಗಳ ದಿನಾಂಕ:12-10-2009ರ ನಡವಳಿಗಳನ್ನು ಲಗತ್ತಿಸಿ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಲಹಾ ಸಮಿತಿ ಸಭೆ ಮುಂದೆ ಮಂಡಿಸಿ ಸರ್ಕಾರದ ಅನುಮೋದನೆ ಕೋರಲಾಗಿತ್ತು. ಆದರೆ ದಿ:26-10-2010 ರಂದು ಮಾನ್ಯ ಮುಖ್ಯ ಕಾರ್ಯದರ್ಶಿಗಳು ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ನಡೆದ ಸಲಹಾ ಸಮಿತಿ ಸಭೆಯಲ್ಲಿ ಹೆಚ್ಚಿನ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಿ ಗುತ್ತಿಗೆ ಅವಧಿ ನವೀಕರಿಸುವಂತೆ ಅಭಿಪ್ರಾಯಪಟ್ಟಿರುತ್ತಾರೆ.

ತದನಂತರ ತೊಗಟವೀರ ಕ್ಷತ್ರಿಯ ಸಂಘರವರು ದಿನಾಂಕ:28-03-2011ರ ಮನವಿ ಪತ್ರದಲ್ಲಿ ದಿನಾಂಕ:19-02-1999 ರಿಂದ ಹಿಂದೆ ಇದ್ದ ವಾರ್ಷಿಕ ಗುತ್ತಿಗೆ ಮೊತ್ತದಂತೆ ಗುತ್ತಿಗೆ ಅವಧಿಯನ್ನು ನವೀಕರಿಸಲು ಕೋರಿರುತ್ತಾರೆ. ನಅಇ 170 ಎಂಎನ್‌ಜಿ 2011, ದಿನಾಂಕ:15-06-2011ರ ಸರ್ಕಾರದ ಪತ್ರದಲ್ಲಿ ಮಾರ್ಗಸೂಚಿ ದರದನ್ವಯ ಪ್ರಸ್ತಾವನೆಯನ್ನು ಪರಿಷ್ಕರಿಸಿ ಸರ್ಕಾರಕ್ಕೆ ಕಳುಹಿಸಿಕೊಡುವಂತೆ ನಿರ್ದೇಶಿಸಿರುತ್ತದೆ.

ಈ ಪ್ರದೇಶದ ಮಾರುಕಟ್ಟೆ ದರವು ದಿನಾಂಕ:17-04-2007ರ ಮಾರ್ಗಸೂಚಿಯಂತೆ ಚದರ ಅಡಿಗಳಿಗೆ ರೂ.5000/- ಗಳಿದ್ದು, 8146.25X5000=4,07,31,250/-ರೂ ಗಳಾಗುತ್ತದೆ. ಇದಕ್ಕೆ ಶೇ 40% ರಷ್ಟು ಹೆಚ್ಚಿಸಿದಲ್ಲಿ ರೂ.1,62,92,500/- ಗಳಾಗುತ್ತದೆ. ಒಟ್ಟು ಮೊತ್ತ ರೂ.5,70,23,750/- ಗಳಾಗುತ್ತದೆ. ಮಾರುಕಟ್ಟೆ ಬೆಲೆಯ ಶೇ 10% ರಂತೆ ಪರಿಗಣಿಸಿದಲ್ಲಿ ವಾರ್ಷಿಕ ರೂ.57,02,375/- ಗಳಾಗುತ್ತದೆ. ಮಾಸಿಕ ರೂ.4,75,198=00 ಗಳಾಗುತ್ತದೆ. ಆಯುಕ್ತರ ಕಛೇರಿ ಸುತ್ತೋಲೆ ದಿನಾಂಕ:01-03-2002ರ ಕ್ರಮ ಸಂಖ್ಯೆ: 05ರ ಅನ್ವಯ ಶೇ 100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದಾಯಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವವರು ಎಂದಿದೆ.

ಆದ್ದರಿಂದ ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ ಕರಾರು ಪತ್ರ ನೊಂದಾಯಿಸುವ ಹಿಂದಿನ ದಿನಾಂಕದವರೆಗೆ ಹಳೆಯ ಗುತ್ತಿಗೆಯ ದರದಂತೆ ಕರಾರು ಪತ್ರ ನೊಂದಾಯಿಸುವ ದಿನಾಂಕದಿಂದ 5 ವರ್ಷಗಳ ಅವಧಿಗೆ ಸೂಕ್ತ ದರವನ್ನು ನಿಗದಿಪಡಿಸಿ ನವೀಕರಿಸಿ ತದನಂತರದ ಮುಂದಿನ 25 ವರ್ಷಗಳಿಗೆ ಸರ್ಕಾರದ ಹಂತದಲ್ಲಿಯೂ ನವೀಕರಣ ಮಾಡುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ : 23-06-2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 05-07-2011ರ ನಿರ್ಣಯ.

***ನಿರ್ಣಯ :-*** ***ದಿನಾಂಕ 23-06-2011ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 05-07-2011ರ ನಿರ್ಣಯವನ್ನು ಒಪ್ಪುತ್ತಾ, ತೊಗಟವೀರ ಕ್ಷತ್ರಿಯ ಸಂಘವು ಜನಾಂಗದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಉಚಿತ ಊಟ, ವಸತಿ ಹಾಗೂ ಇತರೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುತ್ತಾ ಬಡವಿದ್ಯಾರ್ಥಿಗಳ/ವಿಧ್ಯಾರ್ಥಿನಿಯರ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವುದನ್ನು ಪರಿಗಣಿಸಿ ವಾರ್ಷಿಕ ಗುತ್ತಿಗೆ ಮೊತ್ತರೂ.25,000/- ಗಳನ್ನು (ರೂ.ಇಪ್ಪತ್ತೈದು ಸಾವಿರ ಮಾತ್ರ) ನಿಗಧಿಪಡಿಸಿ ಗುತ್ತಿಗೆ ನವೀಕರಿಸುವುದೆಂದು ಸಮಿತಿಯು ತೀರ್ಮಾನಿಸಿತು.***

## ***02]. ವಿಷಯದ ಸಂಖ್ಯೆ :-ತೆಆಸ್ಥಾಸ/139/2011-12***

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಎ3(4)/ಪಿಆರ್/77/11-12, ದಿನಾಂಕ : 06-06-2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ಸಂಖ್ಯೆ:188, ಬಿಳೇಕಹಳ್ಳಿಯಲ್ಲಿ ಶಿಥಿಲವಾದ ಶಾಲಾ ಕಟ್ಟಡವಿದ್ದು, ಸದರಿ ಕಟ್ಟಡವನ್ನು ಕೆಡವಲು ಕಾರ್ಯಪಾಲಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನೀಯರ್ ವಿಭಾಗದಿಂದ ಅನುಮತಿ ಪಡೆದು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬೆಂಗಳೂರು ದಕ್ಷಿಣ ವಲಯ ರವರು ಕಟ್ಟಡವನ್ನು ತೆರವುಗೊಳಿಸಿರುತ್ತಾರೆ. ಸದರಿ ಕಟ್ಟಡವನ್ನು ತೆರವುಗೊಳಿಸಿದ ನಂತರ ಲಭ್ಯವಿರುವ ಜಾಗದ ವಿಸ್ತೀರ್ಣ 67X48 = 3216 ಚ.ಅಡಿಗಳಾಗಿರುತ್ತದೆ. ಹೊಸ ಕಟ್ಟಡ ನಿರ್ಮಾಣದ ಕೆಲಸವನ್ನು ಪ್ರಾರಂಭಿಸಲಾಗಿರುತ್ತದೆ.

ಆದರೆ, ಈ ಜಾಗವು ಶ್ರೀ ಯಲ್ಲಪ್ಪ ರವರಿಗೆ ಸೇರಿರುವ ಜಾಗವೆಂದು ತಿಳಿಸುತ್ತಾ, 67X48 ಚ.ಅಡಿ ವಿಸ್ತೀರ್ಣದ ಜಾಗವು ತಮ್ಮ ಮಾಲೀಕತ್ವದಲ್ಲಿರುವುದಕ್ಕೆ ಸಂಬಂಧಿಸಿದಂತೆ, ಎಲ್ಲಾ ದಾಖಲಾತಿಗಳನ್ನು ಒದಗಿಸಿರುತ್ತಾರೆ. ಮತ್ತು ಇದೆ ಜಾಗದಲ್ಲಿ ಶ್ರೀ ಬಿ.ವಿ.ಸಂಪತ್ ರವರು ಸಹ ತಮ್ಮ ಮಾಲೀಕತ್ವದಲ್ಲಿರುವ 435.00 ಚ.ಅಡಿ ವಿಸ್ತೀರ್ಣದ ಜಾಗವು ಈ ನಿವೇಶನದಲ್ಲಿ ಒಳಪಟ್ಟಿರುವುದಾಗಿ ತಿಳಿಸಿರುತ್ತಾರೆ. ಹಾಗೂ ಸದರಿ ಜಾಗದ ಬಗ್ಗೆ ಇತ್ಯರ್ಥವಾದ ನಂತರ ಮಾತ್ರ ಕಟ್ಟಡ ನಿರ್ಮಾಣಕ್ಕೆ ಅವಕಾಶ ನೀಡುವುದಾಗಿ ತಿಳಿಸಿರುತ್ತಾರೆ.

ಈ ಪೈಕಿ ಶ್ರೀ ಬಿ.ವಿ.ಸಂಪತ್ ರವರು ತಮ್ಮ ಮಾಲೀಕತ್ವದಲ್ಲಿರುವ 435.00 ಚ.ಅಡಿ ವಿಸ್ತೀರ್ಣದ ಜಾಗವನ್ನು ಹಕ್ಕು ಬಿಡುಗಡೆ ಪತ್ರದ ಮುಖೇನ ನಗರಪಾಲಿಕೆಗೆ ಹಸ್ತಾಂತರಿಸಲು ಒಪ್ಪಿಗೆ ಸೂಚಿಸಿರುತ್ತಾರೆ.

ಶ್ರೀ ಯಲ್ಲಪ್ಪ ರವರು ಸದರಿ ಜಾಗದ ಬದಲಾಗಿ, ಇದೆ ವಾರ್ಡ್ ಸಂಖ್ಯೆ:188, ಬಸವಲಿಂಗಪ್ಪ ಬಡಾವಣೆಯ 3ನೇ ಮುಖ್ಯರಸ್ತೆಯಲ್ಲಿರುವ ನಿವೇಶನ ಸಂಖ್ಯೆ:90 ರಲ್ಲಿ 1200.00 ಚ.ಅಡಿಗಳ ವಿಸ್ತೀರ್ಣದ ನಗರಪಾಲಿಕೆ ಜಾಗವನ್ನು ಬದಲಿ ಜಾಗವಾಗಿ ನೀಡಲು ಕೋರಿರುತ್ತಾರೆ. ಈ ಜಾಗವು ನಗರಪಾಲಿಕೆಯ ಅಸ್ಥಿತ್ವದಲ್ಲಿದ್ದು, ಕಂದಾಯ ಅಧಿಕಾರಿಗಳು ನೀಡಿರುವ ಖಾತಾ ದಾಖಲಾತಿಗಳಂತೆ ಈ ಜಾಗವನ್ನು ಸಾರ್ವಜನಿಕರ ಉಪಯೋಗದ ಭಜನೆ ಮನೆಗೆ ಮೀಸಲಿಟ್ಟಿರುವುದಾಗಿ ತಿಳಿಸಿರುತ್ತಾರೆ.

ಸ್ಥಳೀಯ ವಲಯಾಧಿಕಾರಿಗಳು ಈ ಪ್ರಸ್ತಾವನೆಗೆ ಸೂಕ್ತ ಆದೇಶ ನೀಡಲು ಕೋರಿರುತ್ತಾರೆ. ಪ್ರಸ್ತುತ ಜಾಗದ ಮೂಲ ಮಾಲೀಕರು ಶ್ರೀ.ಯಲ್ಲಪ್ಪ ಮತ್ತು ಶ್ರೀ.ಬಿ.ವಿ. ಸಂಪತ್ ಇವರು ಆಗಿರುವುದರಿಂದ ಅವರಿಂದ ಯಾವುದೇ ರೀತಿಯ ಕ್ರಯ ಇತ್ಯಾದಿ ಪತ್ರವಿಲ್ಲದೇ ಶಾಲೆನಡೆಸಿಕೊಂಡು ಬಂದಿದ್ದು ಈ ಜಾಗ ಅದೇ ಉದ್ದೇಶಕ್ಕೆ ಸದುಪಯೋಗಪಡಿಸಿಕೊಳ್ಳಲು ನಿಯಮಾನುಸಾರ ಪಾಲಿಕೆ ಹೆಸರಿಗೆ ಹಕ್ಕು ಬಿಡುಗಡೆ ಪತ್ರ ನೊಂದಾಯಿಸಿಕೊಳ್ಳುವುದು ಅವಶ್ಯಕವಾಗಿರುತ್ತದೆ

ಶ್ರೀಯಲ್ಲಪ್ಪ ರವರಿಗೆ ಸೇರಿದ 2781 ಚದರ ಅಡಿ ಜಾಗದ ಬದಲಿಗೆ ಪಾಲಿಕೆ ಆಸ್ತಿ 1200 ಚದರ ಅಡಿ ನೀಡಲು ಕೋರಿರುತ್ತಾರೆ. 2007ನೇ ಸರ್ಕಾರಿ ಆದೇಶದ ಮಾರ್ಗಸೂಚಿ ದರದಂತೆ ಅವರು ನೀಡಲು ಪ್ರಸ್ತಾಪಿಸಿರುವ 2781 ಚದರ ಅಡಿಗೆ ಮಾರುಕಟ್ಟೆ ದರ ಪ್ರತಿ ಚದೆರ ಅಡಿಗೆ 900/- ರಂತೆ 2781X900 = 25,02,900=ರೂ.ಗಳಾಗಿರುತ್ತದೆ. ಪಾಲಿಕೆಯಿಂದ ನೀಡಲು ಪ್ರಸ್ತಾಪಿಸಲಾಗಿರುವ 1200ಚದರ ಅಡಿಗೆ ಮಾರುಕಟ್ಟೆ ದರ ಪ್ರತಿ ಚದೆರ ಅಡಿಗೆ 850/-ರಂತೆ 1200x850= 10,20,000/-ರೂ.ಗಳಾಗುತ್ತದೆ.

ಶ್ರೀ ಯಲ್ಲಪ್ಪ ರವರು ತಮ್ಮ ಅರ್ಜಿಯಲ್ಲಿ ಕೋರಿರುವಂತೆ, ಬದಲಿ ಜಾಗವನ್ನು ನೀಡುವ ಪ್ರಸ್ತಾವನೆಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ : 06-06-2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 05-07-2011ರ ನಿರ್ಣಯ.

**ನಿರ್ಣಯ :-** ***ದಿನಾಂಕ 06-06-2011ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 05-07-2011ರ ನಿರ್ಣಯವನ್ನು ಒಪ್ಪಿದೆ.***

***03]. ವಿಷಯದ ಸಂಖ್ಯೆ :–ತೆಆಸ್ಥಾಸ/140/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಎ3(4)/ಪಿಆರ್/223/10–11, ದಿನಾಂಕ : 01–06–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್–174, ಹೆಚ್.ಎಸ್.ಆರ್. ಬಡಾವಣೆ, 3ನೇ ಸೆಕ್ಟರ್‌ನಲ್ಲಿ 16ನೇ ಎ ಮೈನ್, 24ನೇ ಅಡ್ಡರಸ್ತೆಯ ಉದ್ಯಾನವನದ ಮೂಲೆಯಲ್ಲಿ ನಂದಿನಿ ಮಿಲ್ಕ್ ಪಾರ್ಲರ್ ತೆರೆಯಲು 8X12 ಅಡಿಗಳ ಸ್ಥಳವನ್ನು ನಿರುದ್ಯೋಗಿ ಅಂಗವಿಕಲೆ ಯಾಗಿರುವುದರಿಂದ, ಮಂಜೂರು ಮಾಡುವಂತೆ ಶ್ರೀಮತಿ ಸಂಧ್ಯಾರಾಣಿ ರವರು ಕೋರಿರುತ್ತಾರೆ.

ಸ್ಥಳೀಯ ಅಧಿಕಾರಿಗಳು ಸ್ಥಳ ಪರಿಶೀಲಿಸಿ, ನಕ್ಷೆಯೊಂದಿಗೆ ವರದಿಯಲ್ಲಿ ಈ ಜಾಗ ಪಾಲಿಕೆ ಆಸ್ತಿಯಾಗಿದ್ದು, ಅರ್ಜಿದಾರರು ಕೋರಿರುವ 8X12 ಅಡಿಗಳ ಜಾಗ ಉದ್ಯಾನವನದ ಮೂಲೆಯಲ್ಲಿ ರುವುದರಿಂದ, ಸುತ್ತಮುತ್ತಲು ಪಾದಚಾರಿಗಳಿಗೆ ಓಡಾಡಲು ಯಾವುದೇ ಅಡಚಣೆ ಇರುವುದಿಲ್ಲ ವಾಗಿರುವುದರಿಂದ, ಮಾನವೀಯತೆ ದೃಷ್ಟಿಯಿಂದ ವಿಶೇಷ ಪ್ರಕರಣವೆಂದು ಪರಿಗಣಿಸಿ, ನಿಯಮಾನು ಸಾರ ಅರ್ಜಿದಾರರಿಗೆ ಗುತ್ತಿಗೆಗೆ ನೀಡಲು ಪ್ರಸ್ತಾಪಿಸಿರುತ್ತಾರೆ.

ಕರ್ನಾಟಕ ಮುನಿಸಿಪಲ್ ಕಾಯ್ದೆನ್ವಯ–1976 ಕಲಂ–176ರ (6) ಹಾಗೂ (ಬಿ)IIರ ಪ್ರಕಾರ ಸ್ಥಾಯಿ ಸಮಿತಿಗಳಿಗೆ 3 ವರ್ಷಗಳ ಅವಧಿಗೆ ಹಾಗೂ ಪಾಲಿಕೆ ಸಭೆಗೆ 5 ವರ್ಷಕ್ಕೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ. ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ(ಕಂ)/ ಪಿ.ಆರ್/115/01–02, ದಿ:01–03–2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆ ಕನಿಷ್ಟ ಶೇ:10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸಬೇಕಾಗಿರುತ್ತದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:17–04–2007ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ವಸತಿಯೇತರ ರೂ.3500/– ಗಳಿದ್ದು, ಅರ್ಜಿದಾರರುಗಳು ಕೋರಿರುವ 8X12 ಅಡಿಗಳ ಜಾಗವು 96 ಚ.ಅಡಿಗಳಾಗುತ್ತದೆ. ಇದರಂತೆ 3500X96 = 3,36,000/– ರೂ.ಗಳಾಗುತ್ತದೆ. ಶೇ:10%ರಷ್ಟು ವಾರ್ಷಿಕ ಗುತ್ತಿಗೆ ಹಣ 33,600/– ರೂ.ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣ 2800/– ರೂ.ಗಳಾಗುತ್ತದೆ.

ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ಕಲಂ–176ರ ಪ್ರಕಾರ ಹಾಗೂ ಸರ್ಕಾರಿ ಆದೇಶ ಸಂಖ್ಯೆ:ನಅಇ/129/ಡಿ.ಎಂ.ಡಿ./2002, ದಿನಾಂಕ:02–06–2003ರನ್ವಯ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದ್ದಲ್ಲಿ, ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜಿನ ಮೂಲಕವೇ ನೀಡುವುದೆಂದಿದೆ.

ಪ್ರಸ್ತುತ ಜಾಗವು ಉದ್ಯಾನವನದಲ್ಲಿ ಬರುತ್ತಿದ್ದು, ಈ ಪ್ರದೇಶವು ಕರ್ನಾಟಕ ಉದ್ಯಾನವನ, ಮೈದಾನ ಮತ್ತು ತೆರೆದ ಪ್ರದೇಶಗಳ (ಪ್ರಿಸರ್ವೇಷನ್ ಅಂಡ್ ರೆಗ್ಯೂಲೇಷನ್) ಕಾಯ್ದೆ–1985ರನ್ವಯ ಸರ್ಕಾರವು ಹೊರಡಿಸಲಾಗಿರುವ ಅಧಿಸೂಚನೆ ದಿ:28–04–2011 ರ ಪುಟ ಸಂಖ್ಯೆ–500 ಕ್ರ.ಸಂ–17 ರಲ್ಲಿ ಪ್ರಕಟಗೊಂಡಿರುತ್ತದೆ. ಈ ಕಾಯ್ದೆಯ ಕಲಂ(6)ರ ಅನುಸಾರ

ಈ ಅಧಿಸೂಚನೆಯಲ್ಲಿ ಪ್ರಕಟಗೊಂಡಿರುವ ಪ್ರದೇಶವನ್ನು ನಿರ್ದಿಷ್ಟ ಪ್ರದೇಶಕ್ಕೆ ಹೊರತುಪಡಿಸಿ ಇತರೆ ಉಪಯೋಗದ ಉದ್ದೇಶಕ್ಕೆ ಪ್ರತಿಬಂಧಿಸಲಾಗಿದೆ. ಹಾಗೂ ಕಲಂ–8(2) ರ ಅನುಸಾರ ಈ ಪ್ರದೇಶವನ್ನು ಬೇರೆ

ಉದ್ದೇಶಕ್ಕೆ ಪರಬಾರೆ, ಕ್ರಯ, ಗುತ್ತಿಗೆ ಅಥವಾ ಪರವಾನಿಗಿ ನೀಡುವುದು. ಅನುರ್ಜಿತ ಮತ್ತು ಪರಿಣಾಮ ಶೂನ್ಯ (NULL AND VOID) ಎಂದು ಸ್ಪಷ್ಟಪಡಿಸಲಾಗಿರುತ್ತದೆ. ಹಾಗೂ ಕಲಂ(11)ರ ಪ್ರಕಾರ ಕಲಂ(6) ಮತ್ತು (8)ನ್ನು ಉಲ್ಲಂಘಿಸಿದವರಿಗೆ 6 ತಿಂಗಳವರೆಗಿನ ಶಿಕ್ಷೆ ಅಥವಾ ದಂಡ ಅಥವಾ ಎರಡೂ ವಿಧಿಸುವ ಅವಕಾಶ ಕಲ್ಪಿಸಲಾಗಿರುತ್ತದೆ.

ಈ ಮೇಲಿನ ಸರ್ಕಾರಿ ನಿಯಮಗಳ ಹಿನ್ನೆಲೆಯಲ್ಲಿ ಶ್ರೀಮತಿ ಸಂಧ್ಯಾರಾಣಿ ರವರಿಗೆ ಗುತ್ತಿಗೆ ನೀಡುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ : 01–06–2011ರ ಟಿಪ್ಪಣಿಯನ್ನು ಒಪ್ಪಿದ್ದು 03 (ಮೂರು) ವರ್ಷದ ಅವಧಿಗೆ ಗುತ್ತಿಗೆ ನೀಡಲು ತೀರ್ಮಾನಿಸಿರುವ, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 05–07–2011ರ ನಿರ್ಣಯ.

ನಿರ್ಣಯ :– *ದಿನಾಂಕ 01–06–2011ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 05–07–2011ರ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ಮೊತ್ತ ರೂ.300/– (ರೂ.ಮುನ್ನೂರು) ರೂ.ಗಳಿಗೆ ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.*

## *04]. ವಿಷಯದ ಸಂಖ್ಯೆ :–ತೆಆಸ್ಥಾಸ/141/2011–12*

ಆಯುಕ್ತರವರು ದಿನಾಂಕಃ 11–07–2011ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಾಲಿಕೆಯ ಕಾರ್ಯಪಾಲಕ ಅಭಿಯಂತರರು, ಗೋವಿಂದರಾಜನಗರ ವಿಭಾಗ ರವರು ಈ ಕೆಳಕಂಡ ಕಾಮಗಾರಿಗಳಿಗೆ ಆಯವ್ಯಯ ಪುಟ ಸಂಖ್ಯೆ 2193/117ರಲ್ಲಿ ಮೀಸಲಿರಿಸಿರುವ Modernisation of footpath ಲೆಕ್ಕ ಶೀರ್ಷಿಕೆ ಅಡಿಯಲ್ಲಿ 4 ಕಾಮಗಾರಿಗಳಿಗೆ ರೂ. 323.50 ಲಕ್ಷಗಳಿಗೆ ಕಾಮಗಾರಿ ಸಂಖ್ಯೆಯನ್ನು ನೀಡುವಂತೆ ಮುಖ್ಯ ಅಭಿಯಂತರರು ದಕ್ಷಿಣ ರವರ ಮೂಲಕ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

| Sl No. | Name of the works | Amount (Rs.in lakhs) |
|---|---|---|
| 1 | Improvements and Developments of footpath and drains in NGEF Main road in ward No: 128 | 98.00 |
| 2 | Improvements and Developments of footpath and drains from 80feet road to University gate in ward No: 128 | 68.40 |
| 3 | Improvements and Developments of footpath and drains from Goodwill apartment to Jyothinagar main road in 80 feet road in ward No: 128 | 95.50 |
| | Improvements and Developments of footpath and drains from Jyothinagar main road to JnanaBharathi road in 80 feet road in ward No: 128 | 61.60 |
| Total | | 323.50 |

ಆಯವ್ಯಯ ಲೆಕ್ಕ ಶೀರ್ಷಿಕೆ – ಆಯವ್ಯಯ ಲೆಕ್ಕೆ ಶೀರ್ಷಿಕೆ – 19 –ಯೋಜನಾ ಶಾಖೆ–ರಸ್ತೆಗೆ ಸಂಬಂಧಿಸಿದ ಕೆಲಸಗಳು– ಆಯ್ದ ರಸ್ತೆಗಳ ನವೀಕರಿಸಿದ ಪಾದಚಾರಿ ಮಾರ್ಗಗಳ ಅಭಿವೃದ್ಧಿ – ಪಿ. ಸಂಖ್ಯೆಃ 2193/117 ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಮೀಸಲಿರಿಸಿರುವ ರೂ. 2000.00 ಲಕ್ಷಗಳಲ್ಲಿ ನೀಡುವಂತೆ ಕಂಡಿಕೆ 10ರಲ್ಲಿ ಕೋರಲಾಗಿದೆ.

ಸದರಿ ಆಯವ್ಯಯ ಲೆಕ್ಕ ಶೀರ್ಷಿಕೆಗಳ ಅನುದಾನದ ವಿವರಗಳು ಕೆಳಕಂಡಂತಿವೆ.

| ರೂ. ಲಕ್ಷಗಳಲ್ಲಿ | | | | | |
|---|---|---|---|---|---|
| **ಆಯವ್ಯಯ ಪಿ.ಸಂಖ್ಯೆ** | **ಅನುದಾನದ ಮೊತ್ತ** | **ಕಾಮಗಾರಿಗಳ ಸಂಖ್ಯೆ** | **ಕಾಮಗಾರಿ ಸಂಖ್ಯೆ ನೀಡಿರುವ/ಆದೇಶಕ್ಕೆ ಸಲ್ಲಿಸಿರುವ ಮೊತ್ತ** | **ಕಾಮಗಾರಿ ಸಂಖ್ಯೆಗೆ ಪ್ರಸ್ತಾವನೆ** | **ಲಭ್ಯವಿರುವ ಅನುದಾನ** |
| 2193/117 | 2000.00 | 4 | 425.25 | 323.50 | 1574.75 |

ಆದ್ದರಿಂದ, ಲಭ್ಯವಿರುವ ಅನುದಾನದಲ್ಲಿ ರೂ. 323.50 ಲಕ್ಷಗಳಿಗೆ ಬೃಹತ್ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ : 19-05-2011ರ ಟಿಪ್ಪಣಿಯಲ್ಲಿ ಕಾಮಗಾರಿ 2011-12ನೇ ಸಾಲಿನ ಆಯವ್ಯಯದಲ್ಲಿ ಕೈಗೆತ್ತಿಕೊಂಡು ನಿರ್ವಹಿಸಲು ತೀರ್ಮಾನಿಸಿರುವುದರಿಂದ 2011-12ನೇ ಸಾಲಿನ ಆಯವ್ಯಯದಲ್ಲಿ ಸೇರಿಸಿ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :- ದಿನಾಂಕ 11-07-2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.***

**ಜಿ. ಮಂಜುನಾಥ್‌ರಾಜು**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 27.07.2011 ರಂದು ನಡೆದ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರುಗಳು | | ಹಾಜರಿದ್ದ ಅಧಿಕಾರಿಗಳು |
|---|---|---|
| ಶ್ರೀಯುತರುಗಳಾದ : | | |
| ಜಿ. ಮಂಜುನಾಥರಾಜು | – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ, |
| ಜಿ. ಮಂಜುನಾಥ | – ಸದಸ್ಯರು | ಉಪ ಆಯುಕ್ತರು (ಆರೋಗ್ಯ), |
| ಲತಾ. ಕೆ | – ಸದಸ್ಯರು | |
| ಎಂ.ಸಿ. ಶ್ರೀನಿವಾಸ್ | – ಸದಸ್ಯರು | |
| ವಿ. ವಾಗಿಶ್ | – ಸದಸ್ಯರು | |
| ಮಂಜುನಾಥ | – ಸದಸ್ಯರು | |
| ಎಲ್. ನಾಗರತ್ನ | – ಸದಸ್ಯರು | |
| ವರಲಕ್ಷ್ಮಿ. ಜೆ | – ಸದಸ್ಯರು | |
| ಆಶಾ ಸುರೇಶ್ | – ಸದಸ್ಯರು | |
| ಎನ್. ಜಯಪಾಲ | – ಸದಸ್ಯರು | |
| ಲಾವಣ್ಯಾಗಣೇಶ್‌ರೆಡ್ಡಿ | – ಸದಸ್ಯರು | |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

## *01]. ವಿಷಯದ ಸಂಖ್ಯೆ :–ತೆಆಸ್ಥಾಸ/204/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಆ.ವೈ.ಅ(ತಾಮಕುಕ)ಪಿಆರ್/75/10–11, ದಿನಾಂಕ : 26–07–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 198 ವಾರ್ಡ್‌ಗಳಲ್ಲಿ ಬಡತನ ರೇಖೆಗಳಿಗಿಂತ ಕೆಳಗಿರುವ ಕುಟುಂಬದ ಎಲ್ಲಾ ಬಿ.ಪಿ.ಎಲ್ ಕಾರ್ಡ್‌ದಾರರಿಗೆ, ನಗರದ ಕೊಳಚೆ ಪ್ರದೇಶದಲ್ಲಿ ವಾಸಿಸುವ ಜನರಿಗೆ ಹಾಗೂ ಎಲ್ಲಾ ಖಾಯಂ ಪೌರಕಾರ್ಮಿಕರಿಗೆ ಮತ್ತು ಗುತ್ತಿಗೆ ಪೌರಕಾರ್ಮಿಕರಿಗೆ ಆಟೋ ಚಾಲಕರಿಗೆ ಮತ್ತು ಸಫಾಯಿ ಕರ್ಮಚಾರಿಗಳಿಗೆ ವಿವಿದ್ದೋದೇಶ ಸ್ಮಾರ್ಟ್ ಕಾರ್ಡ್‌ನ್ನು ವಿತರಿಸಿ, ನಿಗಧಿಪಡಿಸಿದ ಸರ್ಕಾರಿ ಆಸ್ಪತ್ರೆಗಳು ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಚಿಕಿತ್ಸಾಸೇವಾ ಸೌಲಭ್ಯವನ್ನು ಒದಗಿಸುವ ಯೋಜನೆಯನ್ನು ಬೃ.ಬೆಂ.ಮ.ಪಾಲಿಕೆಯು ಹಮ್ಮಿಕೊಳ್ಳಲು ಯೋಜಿಸಲಾಗಿದೆ.

ಈ ಕೆಳಕಂಡಂತೆ ಸ್ಥಾಯಿ ಸಮಿತಿಯ ಅನುಮೋದನೆ ಕೋರಲಾಗಿದೆ.

1) ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಬಂಧ, ದಿನಾಂಕ:18–07–2011 ರಂದು ಪೂಜ್ಯ ಮಹಾಪೌರರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈಗಾಗಲೇ ನಾಮಕರಣಗೊಂಡಿರುವ ಹೆಸರಾದ ಪಂಡಿತ್ ದೀನದಯಾಳ್ ಸುವರ್ಣ ಆರೋಗ್ಯ ಸುರಕ್ಷಾ ಯೋಜನೆಯನ್ನು ಕರ್ನಾಟಕ ಸರ್ಕಾರದಲ್ಲಿರುವಂತೆ, ಶ್ರೀ.ವಾಜಪೇಯಿ ಆರೋಗ್ಯ ಶ್ರೀ ಯೋಜನೆ ಎಂದು ಮರುನಾಮಕರಣ ಮಾಡಬೇಕೆಂದು ಸದರಿ ಯೋಜನೆಯ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಡಾ.ಅಶ್ವಥನಾರಾಯಣ ವಿಧಾನ ಸಭಾ ಸದಸ್ಯರು ಮಂಡಿಸಿದ ಸಲಹೆಗೆ ಸದರಿ ಸಮಿತಿಯ ಸದಸ್ಯರುಗಳು ಸರ್ವಾನುಮತದಿಂದ ಒಪ್ಪಿದ್ದು, ಶ್ರೀ.ವಾಜಪೇಯಿ ಆರೋಗ್ಯ ಶ್ರೀ ಎಂದು ಮರುನಾಮಕರಣ ಮಾಡುವ ಬಗ್ಗೆ.

2) ಸದರಿ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಪಾಲಿಕೆಯಲ್ಲಿ ಗೌವರ್ನರಿಂಗ್ ಕೌನ್ಸಿಲ್ ಇದ್ದು ಇದರಲ್ಲಿ ಪೂಜ್ಯ ಮಹಾಪೌರರು ಅಧ್ಯಕ್ಷರಾಗಿರುತ್ತಾರೆ. ಅದರಂತೆ ಉಳಿದ ಉಪಮಹಾಪೌರರು, ಅಧ್ಯಕ್ಷರು ಆರೋಗ್ಯ ಸ್ಥಾಯಿ ಸಮಿತಿ, ಅಧ್ಯಕ್ಷರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ಅಧ್ಯಕ್ಷರು ಸಾಮಾಜಿಕ ನ್ಯಾಯ ಸಮಿತಿ ರವರನ್ನು ಗೌವರ್ನರಿಂಗ್ ಕೌನ್ಸಿಲ್ ಸದಸ್ಯರನ್ನಾಗಿ ಮಾಡುವ ಬಗ್ಗೆ.

.....2

3) ಸದರಿ ಯೋಜನೆಗೆ ಫಲಾನುಭವಿಗಳಾದ ನಗರದ ಕೊಳಚೆ ಪ್ರದೇಶದ ನಿವಾಸಿಗಳು, ಬಿ.ಪಿ.ಎಲ್ ಕಾರ್ಡ್‌ದಾರರು, ಪೌರಕಾರ್ಮಿಕರು, ಗುತ್ತಿಗೆ ಪೌರಕಾರ್ಮಿಕರು, ಸಫಾಯಿ ಕರ್ಮಚಾರಿಗಳು, ಹಾಗೂ ಆಟೋ ಚಾಲಕರು, ಫಲಾನುಭವಿಗಳಾಗಿರುತ್ತಾರೆ. ಅದರಂತೆ ಸರ್ಕಾರದಿಂದ ವೃದ್ಧ್ಯಾಪ್ಯ ವೇತನ, ವಿಧವಾ ವೇತನ ಮತ್ತು ವಿಕಲಚೇತನ ವೇತನ, ಪಡೆಯುತ್ತಿರುವವರು, ಗೂಡ್ಸ್ ಆಟೋ ಚಾಲಕರು, ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ದುರ್ಬಲರಾದ ವರ್ಗದವರು ಈ ಯೋಜನೆಯನ್ನು ಪಡೆಯಲು ಅವರ ದಾಖಲೆಗಳನ್ನು ಪರಿಶೀಲಿಸಿ ಅರ್ಹ ಫಲಾನುಭವಿಗಳನ್ನು ಗುರುತಿಸಲು, ಇವರುಗಳಿಗೆ ಗುರುತಿನ ಚೀಟಿಯನ್ನು ನೀಡುವ ಸಂಬಂಧ ವಲಯಗಳ ಅಪರ/ಜಂಟಿ ಆಯುಕ್ತರುಗಳು ಸಂಬಂಧಿಸಿದ ಅಧಿಕಾರಿ ಸಿಬ್ಬಂಧಿಯನ್ನು ನಿಯೋಜಿಸಿ ಅರ್ಹ ದಾಖಲೆಗಳನ್ನು ದೃಢೀಕರಿಸಿ, ಸ್ಥಳೀಯ ಜನಪ್ರತಿನಿಧಿಗಳ ಸಲಹೆ ಪಡೆದು ಅರ್ಹಫಲಾನುಭವಿಗಳಿಗೆ ಗುರುತಿನ ಚೀಟಿಯನ್ನು ವಾರ್ಡ್‌ವಾರು ವಿತರಿಸಲು ಹಾಗೂ ಈ ಸಂಬಂಧ ಸಹ ಶ್ರೀ.ವಾಜಪೇಯಿ ಆರೋಗ್ಯ ಶ್ರೀ. ಯೋಜನೆ ಅಡಿಯಲ್ಲಿ ಫಲಾನುಭವಿಗಳೆಂದು ಪರಿಗಣಿಸಬಹುದಾಗಿದೆ.

4) ಈ ಯೋಜನೆಯ ಬಗ್ಗೆ ದಿನಾಂಕ: 8–2–2011 ರಂದು ಆರೋಗ್ಯ ಸ್ಥಾಯಿ ಸಮಿತಿ ಮತ್ತು 21–2–2011 ರಂದು ಸಾಮಾಜಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆಯ ಸಭೆಯಲ್ಲಿ ದಿನಾಂಕ: 24–2–2011 ರಂದು ಸ್ಮಾರ್ಟ್ ಕಾರ್ಡ್ ವಿತರಿಸಲು ಒಟ್ಟು ಮೊತ್ತ ರೂ.9.2ಕೋಟಿಗಳಷ್ಟು ಹಿಂದಿನ ಸಾಲಿನಲ್ಲಿ ಭರಿಸಲು ಪಾಲಿಕೆಯ ಸಭೆಯಲ್ಲಿ ತೀರ್ಮಾನಿಸಲಾಗಿದ್ದು, ದಿನಾಂಕ: 19–7–2011 ರಂದು ಈ ಯೋಜನೆಯ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಡಾ.ಅಶ್ವಥನಾರಾಯಣ ರವರ ಅಧ್ಯಕ್ಷತೆಯಲ್ಲಿ ನಡೆದ ಉಪ ಸಮಿತಿ ಸಭೆಯಲ್ಲಿ 50 ಡೆಟಾ ಸೆಂಟರ್ ಮಾಡಿದಲ್ಲಿ ಹೆಚ್ಚಿನ ಹಣ ಪಾಲಿಕೆಯಿಂದ ಭರಿಸಬೇಕಾಗಿರುವುದರಿಂದ, ಇದರಲ್ಲಿ ಕೆಲವೊಂದು ಮಾರ್ಪಾಡು ಮಾಡಿದ್ದು, 50 ಡೆಟಾ ಸೆಂಟರ್‌ನಿಂದ, ವಿಧಾನಸಭಾವಾರು 27 ಡೆಟಾ ಸೆಂಟರ್‌ಗೆ ಮಿತಿಗೊಳಿಸಿ ಮತ್ತು ಇನ್ನಿತರೆ ತಾಂತ್ರಿಕ ಉಪಕರಣಗಳನ್ನು ಕಡಿಮೆಗೊಳಿಸಿದ್ದು, ಈ ಮೇರೆಗೆ ಪ್ರಸ್ತಾಪಿತ ಮೊತ್ತವು ಪರಿಷ್ಕೃತಗೊಂಡಿದ್ದು, ಇದರಿಂದ ಹಾಲಿ ವೆಚ್ಚವು ರೂ.4.91ಕೋಟಿಗಳಾಗಿರುತ್ತದೆ. ಸದರಿ ಸಂಸ್ಥೆಯು ಸಹ ಒಪ್ಪಿಗೆ ಸೂಚಿಸಿ ಈ ಮೊತ್ತಕ್ಕೆ ಕಾರ್ಯನಿರ್ವಹಿಸಲು ಒಪ್ಪಿಗೆ ಪತ್ರವನ್ನು ನೀಡಿರುತ್ತಾರೆ. ಅದರಂತೆ ಈ ಸಂಸ್ಥೆಯವರಿಗೆ ರೂ.4.50 ಕೋಟಿ ಪಾವತಿಸುವ ಬಗ್ಗೆ ಸದರಿ ಯೋಜನೆಯಲ್ಲಿ ಪ್ರಾಥಮಿಕ ಹಂತದಲ್ಲಿ ಒಂದು ಕಾರ್ಡ್‌ಗೆ ರೂ.37–00ರಂತೆ, 1.ಲಕ್ಷ ಫಲಾನುಭವಿಗಳಿಗೆ 1 ಲಕ್ಷ ಕಾರ್ಡ್ ವಿತರಿಸಲು ಒಟ್ಟು ರೂ.37 ಲಕ್ಷ ರೂಗಳನ್ನು ಭರಿಸಬೇಕಾಗಿರುತ್ತದೆ. ಉಳಿದ ಫಲಾನುಭವಿಗಳಿಗೂ ಸಹ ಈ ದರದಲ್ಲಿಯೇ ಕಾರ್ಡ್‌ಗಳನ್ನು ವಿತರಿಸಲು ಅನುಮೋದನೆ ಕೋರಲಾಗಿರುತ್ತದೆ. ಮುಂದಿನ ದಿನಗಳಲ್ಲಿ ಬೇಕಾದಲ್ಲಿ ಅವಶ್ಯಕತೆಯನುಗುಣವಾಗಿ ಹೆಚ್ಚಿನ ಡೆಟಾ ಸೆಂಟರ್‌ಗಳನ್ನು ಅಳವಡಿಸಿಕೊಳ್ಳಬಹುದಾಗಿರುತ್ತದೆ.

5) ಸುವರ್ಣ ಆರೋಗ್ಯ ಸುರಕ್ಷ ಟ್ರಸ್ಟಗೆ ಪ್ರಾರಂಭಿಕವಾಗಿ ತಲಾ ಒಂದು ಕುಟುಂಬಕ್ಕೆ ರೂ.300/–(ಮೂರು ನೂರು ಮಾತ್ರ) ಗಳಂತೆ ಒಂದು ವರ್ಷಕ್ಕೆ 1 ಲಕ್ಷ ಕುಟುಂಬಗಳಿಗೆ ರೂ.3.00ಕೋಟಿ ಪಾವತಿಸಲು ಸರ್ಕಾರದ ಮಾರ್ಗಸೂಚಿಯಂತೆ ಕ್ರಮವಹಿಸಬೇಕಾಗಿರುತ್ತದೆ.

ಸದರಿ ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ಸಲ್ಲಿಸಲಾದ ಮೇಲ್ಕಂಡ ಅಂಶಗಳಿಗೆ ತಮ್ಮ ಅನುಮೋದನೆ ಕೋರಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :*** ***ದಿನಾಂಕ : 26–07–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.***

**ಜಿ. ಮಂಜುನಾಥ್‌ರಾಜು**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**